ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಹೊರ್ಮುಜ್ ಜಲಸಂಧಿ ಮೂಲಕ ಸಾಗುವ ಹಡಗುಗಳಿಂದ ಶುಲ್ಕ ಸಂಗ್ರಹಿಸುತ್ತಿರುವ ಇರಾನ್‌ನ ಪರ್ಷಿಯನ್ ಕೊಲ್ಲಿ ಜಲಸಂಧಿ ಪ್ರಾಧಿಕಾರದ ಮೇಲೆ ನಿರ್ಬಂಧ ಹೇರಿದ್ದಾಗಿ ಅಮೇರಿಕಾದ ಹಣಕಾಸು ಇಲಾಖೆ ಘೋಷಿಸಿದೆ.

29 ಮೇ, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 79 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಹೆಚ್.ದೇವೇಗೌಡರು ಪ್ರಧಾನಿಯಾಗಿ ಮೇ 31ಕ್ಕೆ 30 ವರ್ಷ » 2



ಚಂದ್ರನ ದಕ್ಷಿಣ ಧ್ರುವದಲ್ಲಿ ಮಂಜುಗಡ್ಡೆ ಪತ್ತೆ » 3



ವಿನೇಶ್‌ಗೆ ಟ್ರಯಲ್ಸ್‌ನಲ್ಲಿ ಅವಕಾಶ » 4

# ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ

## ಹೈಕಮಾಂಡ್ ಸೂಚನೆಯಂತೆ ಪದತ್ಯಾಗ : ಡಿ.ಕೆ.ಶಿವಕುಮಾರ್ ನೂತನ ಸಿ.ಎಂ.

• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರು ಗುರುವಾರ ರಾಜೀನಾಮೆ ನೀಡಿದ್ದಾರೆ. ಮುಂದಿನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ವಹಿಸಿಕೊಳ್ಳುವುದು ಬಹುತೇಕ ಖಚಿತವಾಗಿದೆ. ರಾಜ್ಯ ರಾಜಕೀಯದಲ್ಲಿ ಹಲವು ದಿನಗಳಿಂದ ನಡೆಯುತ್ತಿದ್ದ ಕುರ್ಚಿ ಕದನಕ್ಕೆ ತೆರೆ ಬಿದ್ದಿದೆ.

ಮಧ್ಯಾಹ್ನ ಲೋಕಭವನಕ್ಕೆ ಆಗಮಿಸಿದ ಸಿದ್ದರಾಮಯ್ಯ ಅವರು, ರಾಜ್ಯಪಾಲರ ಅನುಪಸ್ಥಿತಿಯಲ್ಲಿ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪ್ರಭುಶಂಕರ್ ಅವರಿಗೆ ರಾಜೀನಾಮೆ ಪತ್ರವನ್ನು ಸಲ್ಲಿಸಿದರು. ಸದ್ಯಕ್ಕೆ ರಾಜೀನಾಮೆ ಪತ್ರವನ್ನು ಕಾರ್ಯದರ್ಶಿಗಳು ಸ್ವೀಕರಿಸಿದ್ದರೂ, ಸಂವಿಧಾನದ ನಿಯಮಾವಳಿಗಳ ಪ್ರಕಾರ ರಾಜ್ಯಪಾಲರು ಖುದ್ದಾಗಿ ಸಹಿ ಮಾಡಿದ ಬಳಿಕವೇ ರಾಜೀನಾಮೆ ಅಧಿಕೃತವಾಗಿ ಅಂಗೀಕಾರವಾಗಲಿದೆ. ಮೂಲಗಳ ಪ್ರಕಾರ ರಾಜ್ಯಪಾಲರು ಗುರುವಾರ ರಾತ್ರಿ ಬೆಂಗಳೂರಿಗೆ ಮರಳುವ ಸಾಧ್ಯತೆ ಇದೆ. ರಾಜ್ಯಪಾಲರ ಸಹಿಯ ಬಳಿಕವಷ್ಟೇ ರಾಜೀನಾಮೆ ಅಂಗೀಕಾರದ ಔಪಚಾರಿಕ



ಪ್ರಕ್ರಿಯೆಗಳು ಪೂರ್ಣಗೊಳ್ಳಲಿವೆ.

**ಒತ್ತಡವಿಲ್ಲದೆ ರಾಜೀನಾಮೆ**

ತಮ್ಮ ರಾಜೀನಾಮೆ ಕುರಿತು ಮಾತನಾಡಿದ ಸಿದ್ದರಾಮಯ್ಯ ಅವರು, ಹೈಕಮಾಂಡ್ ಯಾವಾಗ ಹೇಳುತ್ತದೋ ಆಗ ರಾಜೀನಾಮೆ ನೀಡುತ್ತೇನೆಂದು ಮೊದಲಿನಿಂದಲೂ ಹೇಳುತ್ತಿದ್ದೆ. ಯಾವ ಒತ್ತಡವಿಲ್ಲದೆ, ಹೈಕಮಾಂಡ್ ಸೂಚನೆ ನೀಡಿದ ತಕ್ಷಣ ಸ್ವಯಂ ಪ್ರೇರಿತವಾಗಿ ರಾಜೀನಾಮೆ ನೀಡಿದ್ದೇನೆಂದು ಸ್ಪಷ್ಟಪಡಿಸಿದರು.

ಮುಂದಿನ ಮುಖ್ಯಮಂತ್ರಿ ಯಾರೆಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರು, ಆ ಬಗ್ಗೆ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ. ಶಾಸಕಾಂಗ ಪಕ್ಷದ ನಿರ್ಧಾರ ಮತ್ತು ಹೈಕಮಾಂಡ್ ನಿರ್ಧಾರದಂತೆ ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರೆಂಬುದು ಅಂತಿಮವಾಗಲಿದೆ ಎಂದು ಹೇಳಿದರು

**ಸಚಿವರೊಂದಿಗೆ ಬ್ರೇಕ್‌ಫಾಸ್ಟ್ ಮೀಟಿಂಗ್**

ರಾಜೀನಾಮೆ ನೀಡುವುದಕ್ಕೂ ಮುನ್ನಾ ಬೆಳಿಗ್ಗೆ ಮುಖ್ಯಮಂತ್ರಿ ಅಧಿಕೃತ ನಿವಾಸ ಕಾವೇರಿಯಲ್ಲಿ ಸಚಿವರ ಕೊನೆಯ ಬ್ರೇಕ್‌ಫಾಸ್ಟ್ ಮೀಟಿಂಗ್ ನಡೆಯಿತು. ಉಪಾಹಾರ ಸಭೆಯಲ್ಲಿ ಭಾಗಿಯಾಗಿದ್ದ ಪ್ರಮುಖ ಮಂತ್ರಿಗಳು ಮತ್ತು ಆಪ್ತ ನಾಯಕರು ಸಿದ್ದರಾಮಯ್ಯ ಅವರ ಸುದೀರ್ಘ ಹೋರಾಟದ ಪಯಣವನ್ನು ನೆನೆದು ಭಾವುಕರಾದರು.

ಈ ವೇಳೆ ಮಾತನಾಡಿದ ಸಿದ್ದರಾಮಯ್ಯ ಅವರು, ನನಗೆ ಯಾವುದೇ ನೋವಿಲ್ಲ, ಮನಃಪೂರ್ವಕವಾಗಿ ರಾಜೀನಾಮೆ ನೀಡುತ್ತಿದ್ದೇನೆ. ಹೈಕಮಾಂಡ್ ಹೇಳುವುದನ್ನು ಪಾಲನೆ ಮಾಡುವುದು ನನ್ನ ಕರ್ತವ್ಯ. ಈ ಹಿಂದೆ ನಡೆದ ಒಪ್ಪಂದ ಸೂತ್ರ ಬಿಚ್ಚಿಟ್ಟ ಸಿದ್ದರಾಮಯ್ಯ, ಸಂಪುಟ ಸಹೋದ್ಯೋಗಿಗಳ ಮುಂದೆ ರಾಜೀನಾಮೆ ನೀಡುವ ನಿರ್ಧಾರ ಪ್ರಕಟಿಸಿದರು.

ಮುಖ್ಯಮಂತ್ರಿ- ಉಪಮುಖ್ಯಮಂತ್ರಿ ಫೋಟೋಗಳನ್ನು ಹಂಚಿಕೊಂಡ ಕಾಂಗ್ರೆಸ್, ಅಂದು ಇಂದು ಎಂದೆಂದೂ ಒಗ್ಗಟ್ಟೇ ನಮ್ಮ ಶಕ್ತಿ. ಸಾರ್ವಜನಿಕರ ಸೇವೆಯೇ ನಮ್ಮ ಗುರಿ ಎಂದು ಟ್ವೀಟ್ ಮಾಡಿದೆ.

> ರಾಜ್ಯಪಾಲರು ಮರಳಿದ ಬಳಿಕ ಸಂವಿಧಾನದ ನಿಯಮಾವಳಿಗಳ ಪ್ರಕಾರ ನನ್ನ ರಾಜೀನಾಮೆಯನ್ನು ಅಂಗೀಕರಿಸಲಿದ್ದಾರೆಂಬ ಸಂಪೂರ್ಣ ವಿಶ್ವಾಸವಿದೆ ಮತ್ತು ಅದು ಅವರ ಜವಾಬ್ದಾರಿಯಾಗಿದೆ. ನಮ್ಮ ಪಕ್ಷವು 135+1 ಸ್ಥಾನಗಳನ್ನು ಹೊಂದಿದ್ದು, ಇಬ್ಬರು ಪಕ್ಷೇತರರ ಬೆಂಬಲವೂ ಇದೆ. ಸರ್ಕಾರಕ್ಕೆ ಸಂಪೂರ್ಣ ಬಹುಮತವಿರುವುದರಿಂದ ಮುಂದಿನ ಮುಖ್ಯಮಂತ್ರಿಗೆ ಅವಕಾಶ ಮಾಡಿಕೊಡುವುದು ಸಂವಿಧಾನ ಬದ್ಧವಾಗಿದೆ.
>
> -ಸಿದ್ದರಾಮಯ್ಯ

### ಹೊಸ ಸರ್ಕಾರ ರಚನೆ ಪ್ರಕ್ರಿಯೆ ಚುರುಕು

ಸಿದ್ದರಾಮಯ್ಯ ರಾಜೀನಾಮೆ ಸಲ್ಲಿಸಿದ ನಂತರ ಹೊಸ ಸರ್ಕಾರ ರಚನೆ ಪ್ರಕ್ರಿಯೆ ಚುರುಕುಗೊಂಡಿದೆ. ಈ ಕುರಿತು ಚರ್ಚಿಸಲು ರಾಜ್ಯ ನಾಯಕರು ದೆಹಲಿಗೆ ಎರಡನೇ ಸುತ್ತಿನ ಭೇಟಿ ನೀಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಿದ್ದು, ಅವರ ಬೆನ್ನಲ್ಲೇ ಡಿ.ಕೆ.ಶಿವಕುಮಾರ್ ಅವರು ಕೂಡ ಸಂಜೆಯೇ ದೆಹಲಿಗೆ ಪಯಣ ಬೆಳೆಸಿದ್ದಾರೆ.

ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ್ ಖರ್ಗೆ ಅವರೊಂದಿಗೆ ಚರ್ಚಿಸಿ ಸಿಎಲ್‌ಪಿ ಸಭೆ, ನೂತನ ಮುಖ್ಯಮಂತ್ರಿ ಆಯ್ಕೆ, ಡಿಸಿಎಂ ಸ್ಥಾನಗಳ ಹಂಚಿಕೆ ಮತ್ತು ಸಚಿವ ಸಂಪುಟ ರಚನೆ ಕುರಿತು ನಾಯಕರು ಮಾತುಕತೆ ನಡೆಸಲಿದ್ದಾರೆ. ಹೈಕಮಾಂಡ್ ಸೂಚನೆಯಂತೆ ಎಲ್ಲಾ ಬೆಳವಣಿಗೆಗಳು ನಡೆಯಲಿವೆ. ನೂತನ ಮುಖ್ಯಮಂತ್ರಿಗಳೊಂದಿಗೆ ಎಷ್ಟು ಸಚಿವರು ಪ್ರಮಾಣ ವಚನ ಸ್ವೀಕರಿಸುತ್ತಾರೆಂಬ ಬಗ್ಗೆಯೂ ಚರ್ಚೆಗಳು ನಡೆಯಲಿವೆ.

ಶನಿವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ಸೇರುವ ಸಾಧ್ಯತೆ ಇದ್ದು, ಅದೇ ದಿನ ಹೊಸ ಮುಖ್ಯಮಂತ್ರಿ ಮತ್ತು ಅವರ ಸಚಿವ ಸಂಪುಟದ ಪ್ರಮಾಣ ವಚನ ಸ್ವೀಕಾರ ನಡೆಯಲಿದೆ. ಡಿ.ಕೆ.ಶಿವಕುಮಾರ್ ಅವರು ದೇವರು, ಜ್ಯೋತಿಷ್ಯದ ಮೇಲೆ ಹೆಚ್ಚಿನ ನಂಬಿಕೆಯುಳ್ಳವರಾಗಿದ್ದು, ಅವರು ಶುಭ ಸಮಯ ಕೋರಿದರೆ ಭಾನುವಾರ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯುವ ಸಾಧ್ಯತೆಯೂ ಇದೆ ಎಂದು ಮೂಲಗಳು ತಿಳಿಸಿವೆ.




ಗುರುವಾರ ಸಿದ್ದರಾಮಯ್ಯ ಅವರ ಕಾವೇರಿ ನಿವಾಸಕ್ಕೆ ಆಗಮಿಸಿದ ಡಿ.ಕೆ.ಶಿವಕುಮಾರ್ ಅವರು ಸಿದ್ದರಾಮಯ್ಯ ಅವರನ್ನು ತಬ್ಬಿಕೊಂಡು, ಕಾಲಿಗೆ ಬಿದ್ದು ಆಶೀರ್ವಾದ ಪಡೆದರು. ಉಪಹಾರ ಸಭೆಗೂ ಮೊದಲು ಡಿ.ಕೆ.ಶಿವಕುಮಾರ್ ಅವರೊಂದಿಗೆ ಸಿದ್ದರಾಮಯ್ಯ ಅವರು ಪ್ರತ್ಯೇಕ ಮಾತುಕತೆ ನಡೆಸಿದರು.

# ಬಕ್ರೀದ್ : ಈದ್ಗಾದಲ್ಲಿ ಸಾಮೂಹಿಕ ಪ್ರಾರ್ಥನೆ

• ಪ್ರಜೋದಯ ವರದಿ

**ಹಾಸನ:** ತ್ಯಾಗ, ಬಲಿದಾನ ಹಾಗು ಸಹೋದರತ್ವದ ಸಂದೇಶ ಸಾರುವ ಬಕ್ರೀದ್‌ನ್ನು ಜಿಲ್ಲೆಯಾದ್ಯಂತ ಶುಕ್ರವಾರ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು. ನಗರದ ಈದ್ಗಾ ಮೈದಾನ ಹಾಗು ಮಸೀದಿಗಳಲ್ಲಿ ಮುಸ್ಲಿಂ ಸಮುದಾಯದವರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ನಗರದ ಹೊಸಲೈನ್ ರಸ್ತೆ ಬಳಿಯ ಹಳೇ ಈದ್ಗಾ ಮೈದಾನದಲ್ಲಿ ಬೆಳಿಗ್ಗೆ 8 ಗಂಟೆಗೆ ವಿಶೇಷ ಪ್ರಾರ್ಥನೆ ನೆರವೇರಿತು. ಬಳಿಕ ನಗರದ 80 ಅಡಿ ರಸ್ತೆ ಸಮೀಪದ ಹೊಸ ಈದ್ಗಾ ಮೈದಾನದಲ್ಲಿ ಬೆಳಿಗ್ಗೆ 9.15ಕ್ಕೆ ಮತ್ತೊಂದು ಸಾಮೂಹಿಕ ಪ್ರಾರ್ಥನೆ ನಡೆಯಿತು. ಮಕ್ಕಳು, ಯುವಕರು ಹಾಗೂ ಹಿರಿಯರು ಹೊಸ ಉಡುಪು ಧರಿಸಿ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡಿದ್ದರು. ಪ್ರಾರ್ಥನೆ ಬಳಿಕ ಪರಸ್ಪರ ಆಲಿಂಗಿಸಿಕೊಂಡು ಶುಭಾಶಯ ವಿನಿಮಯ



ಮಾಡಿಕೊಂಡು, ದೇಶದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಸಮೃದ್ಧಿ ನೆಲೆಸಲೆಂದು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ನಗರ 80 ಅಡಿ ರಸ್ತೆಯ ಈದ್ಗಾ ಮೈದಾನಕ್ಕೆ ಭೇಟಿ ನೀಡಿದ ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಪ್ರೀತಿ, ತ್ಯಾಗ, ಶಾಂತಿ ಮತ್ತು ಸಹೋದರತ್ವದ ಸಂದೇಶ ಸಾರುವ ಈ ಪವಿತ್ರ ಹಬ್ಬವು ಸಮಾಜದಲ್ಲಿ ಸೌಹಾರ್ದತೆ ಮತ್ತು ಮಾನವೀಯ ಮೌಲ್ಯಗಳನ್ನು

» ನಾಲ್ಕನೇ ಪುಟದಲ್ಲಿ

# ನಾಳೆ ಹೆತ್ತೂರಿನಲ್ಲಿ ಪ್ರತಿಭಾ ಪುರಸ್ಕಾರ

• ಪ್ರಜೋದಯ ವರದಿ

**ಹೆತ್ತೂರು:** ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ಘಟಕದ ವತಿಯಿಂದ ಪ್ರತಿಭಾ ಪುರಸ್ಕಾರವನ್ನು ಮೇ 30ರಂದು ಬೆಳಿಗ್ಗೆ 10.30ಕ್ಕೆ ಹೋಬಳಿ ಬೆಳೆಗಾರರ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದು ಹಾಗು ಎಸ್‌ಎಸ್‌ಎಲ್‌ಸಿ ಕನ್ನಡ ಐಚ್ಛಿಕ ವಿಷಯದಲ್ಲಿ 125ಕ್ಕೆ 125 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಗುವುದು. ಜಿಲ್ಲಾಧ್ಯಕ್ಷ ಎಚ್.ಎಲ್.ಮಲ್ಲೇಶ್‌ಗೌಡ ಕಾರ್ಯಕ್ರಮ ಉದ್ಘಾಟಿಸುವರು.

# ಮಹಿಳಾ-ಮಕ್ಕಳ ಆಸ್ಪತ್ರೆಗೆ ಸಿಇಓ ದಿಢೀರ್ ಭೇಟಿ

## 3 ಗಂಟೆಗಳ ಕಲಾ ಐಸಿಯು, ಓಪಿಡಿ, ಐಪಿಡಿ, ನವಜಾತ ಶಿಶು ಘಟಕ ಪರಿಶೀಲನೆ

• ಪ್ರಜೋದಯ ವರದಿ

**ಹಾಸನ :** ಜಿಲ್ಲಾ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲ ಅವರು ಗುರುವಾರ ದಿಢೀರ್ ಭೇಟಿ ನೀಡಿ ಆಸ್ಪತ್ರೆಯ ಪ್ರಯೋಗಾಲಯ, ಐಸಿಯು, ಓಪಿಡಿ, ಐಪಿಡಿ, ನವಜಾತ ಶಿಶು ಘಟಕ, ಸಮಾಲೋಚನಾ ವಿಭಾಗಗಳ ವೀಕ್ಷಣೆ ಮಾಡಿದರು.

ಸುಮಾರು 3 ಗಂಟೆಗಳಿಗೂ ಹೆಚ್ಚು ಕಾಲ ವಿವಿಧ ವಿಭಾಗಗಳ ಸೌಲಭ್ಯಗಳು, ಚಿಕಿತ್ಸಾ ಕ್ರಮಗಳು, ಸ್ವಚ್ಛತೆ, ಸಿಬ್ಬಂದಿಯ ಕಾರ್ಯನಿರ್ವಹಣೆ ಅವಲೋಕಿಸಿದರು. ಪ್ರತಿಯೊಂದು ವಿಭಾ




ಗದಲ್ಲಿಯೂ ವೈದ್ಯರು, ಸಿಬ್ಬಂದಿ ಹಾಗು ರೋಗಿಗಳ ಕುಟುಂಬ ಸದಸ್ಯರೊಂದಿಗೆ ಚರ್ಚಿಸಿ ಇಲ್ಲಿನ ಸಮಸ್ಯೆ, ಅವಶ್ಯಕತೆ ಮತ್ತು ಸುಧಾರಣೆಗೆ ಬೇಕಾದ ಅಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು.

ಪರಿಶೀಲನೆ ಬಳಿಕ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ಇನ್ನಷ್ಟು ಉತ್ತಮ ಸೇವೆ ನೀಡುವ ಉದ್ದೇಶದಿಂದ ಪ್ರತಿಯೊಂದು ಅಂಶವನ್ನೂ ಗಮನಿಸಲಾಗುತ್ತಿದೆ. ವಿಶೇಷವಾಗಿ ತಾಯಂದಿರು ಮತ್ತು ಮಕ್ಕಳಿಗೆ ಗುಣಮಟ್ಟದ ಆರೋಗ್ಯ ಸೇವೆ ದೊರಕಬೇಕೆಂಬುದು ಸರ್ಕಾರದ ಆದ್ಯತೆ. ಹಿಮ್ಸ್ ಮಕ್ಕಳ ಆಸ್ಪತ್ರೆಯಲ್ಲಿ

» ನಾಲ್ಕನೇ ಪುಟದಲ್ಲಿ

> ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಕೆಲ ವಿಭಾಗಗಳಲ್ಲಿ ಸಿಬ್ಬಂದಿ ಕೊರತೆ ಕಂಡುಬಂದಿದೆ. ಈ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗುವುದು. ಅಗತ್ಯ ಇರುವ ಕಡೆ ಮಾನವ ಸಂಪನ್ಮೂಲ ಒದಗಿಸುವ ಬಗ್ಗೆ ಪರಿಶೀಲನೆ ನಡೆಸಲಾಗುವುದು.
>
> - ಶುಭಂ ಶುಕ್ಲ, ಸಿಇಓ, ಜಿ.ಪಂ.

# ರಾಷ್ಟ್ರ ರಾಜಕಾರಣಕ್ಕೆ ಹೋಗಲ್ಲ: ಸಿದ್ದರಾಮಯ್ಯ

## ರಾಜ್ಯದಲ್ಲೇ ಸಕ್ರಿಯ : ರಾಜ್ಯಸಭೆಗೆ ಹೋಗುವ ಆಫರ್ ನಿರಾಕರಣೆ

• ಪ್ರಜೋದಯ ವರದಿ

**ಬೆಂಗಳೂರು:** ಯಾವುದೇ ಕಾರಣಕ್ಕೂ ತಾವು ರಾಷ್ಟ್ರ ರಾಜಕಾರಣಕ್ಕೆ ಹೋಗುವುದಿಲ್ಲ. ರಾಜ್ಯಸಭೆಗೆ ಹೋಗುವ ಅವಕಾಶ ಬಂದಿತ್ತು, ವಿನಮ್ರವಾಗಿ ನಿರಾಕರಿಸಿದ್ದು, ರಾಜ್ಯದಲ್ಲೇ ಸಕ್ರಿಯನಾಗಿರುತ್ತೇನೆಂದು ಸಿದ್ದರಾಮಯ್ಯ ಅವರು ತಿಳಿಸಿದರು.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಬಳಿಕ ಗೃಹಕಚೇರಿ ಕೃಷ್ಣಾದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಜನರು ಆಯ್ಕೆ ಮಾಡಿದ್ದು ಐದು ವರ್ಷಕ್ಕೆ. ಅಲ್ಲಿಯವರೆಗೆ ನನ್ನ ಕ್ಷೇತ್ರದಲ್ಲಿ ಕೆಲಸ ಮಾಡುತ್ತೇನೆಂದರು.

ನಾನು ಯಾವತ್ತೂ ಅಧಿಕಾರ, ಹಣದ ಹಿಂದೆ ಹೋದವನಲ್ಲ. ಆಸ್ತಿ ಪಾಸ್ತಿ ಮಾಡಿಕೊಳ್ಳಬೇಕೆಂಬ ಯೋಚನೆ ಮಾಡಿರಲಿಲ್ಲ. 1983ರಲ್ಲಿ ಮೊದಲ ಬಾರಿ ಶಾಸಕನಾದವನು, ರಾಜಕಾರಣಕ್ಕೆ ಬಂದು ಸುಮಾರು 50 ವರ್ಷ ಆಗುತ್ತಾ ಬಂದಿದೆ, ನನ್ನ ರಾಜಕೀಯ ಜೀವನ ತೆರೆದ ಪುಸ್ತಕ. ಯಾವತ್ತೂ ಕೂಡ ನನ್ನ ಮೌಲ್ಯ, ಸಿದ್ಧಾಂತದಲ್ಲಿ ರಾಜೀ ಆಗಿಲ್ಲ, ಕಟ್ಟ ಕಡೆಯ ವ್ಯಕ್ತಿಗೂ ಅನ್ನ, ವಸತಿ, ಶಿಕ್ಷಣ ಒದಗಿಸಬೇಕೆಂಬ ನಂಬಿಕೆ, ಸಮಾಜದಲ್ಲಿರುವ ಎಲ್ಲಾ ಬಡವರಿಗಾಗಿ ಗ್ಯಾರಂಟಿ ಯೋಜನೆ ಜಾರಿ ಮಾಡಲಾಗಿದೆ ಎಂದರು.

ಅಸಮಾನತೆ ತೊಲಗಬೇಕಾದರೆ ಎಲ್ಲರಿಗೂ ಸಮಾನತೆ ಅವಕಾಶ ಸಿಗಬೇಕು. ಹೀಗಾಗಿ ಚುನಾವಣೆ ಸಂದರ್ಭದಲ್ಲಿ ನೀಡಿದ್ದ ಭರವಸೆಗಳನ್ನು ನಾವು ಈಡೇರಿಸಿದ್ದೇವೆ. 2013ರಲ್ಲಿ ಕೊಟ್ಟಿದ್ದ 165 ಭರವಸೆಗಳಲ್ಲಿ 158 ಭರವಸೆ ಈಡೇರಿಸಿದ್ದೇನೆ. 2023ರಲ್ಲಿ



ಕೊಟ್ಟಿದ್ದ 550ಕ್ಕೂ ಹೆಚ್ಚು ಭರವಸೆಗಳನ್ನು ನಾವು ಕೊಟ್ಟಿದ್ದೆವು. 550 ಭರವಸೆಗಳ ಪೈಕಿ ಸುಮಾರು 300 ಭರವಸೆಗಳನ್ನು ಈಡೇರಿಸಿದ್ದೇವೆ. ಅಲ್ಲದೇ ಚುನಾವಣೆ ವೇಳೆ ಐದು ಗ್ಯಾರಂಟಿಗಳನ್ನು ಘೋಷಣೆ ಮಾಡಿದ್ದೆವು. ಅದರಂತೆ ಐದು ಗ್ಯಾರಂಟಿಗಳನ್ನು ಜಾರಿ ಮಾಡಿದ್ದೇವೆ ಎಂದರು.

**ವಿಪಕ್ಷಗಳಿಗೆ ಸಿದ್ದರಾಮಯ್ಯ ಚಾಟಿ**

ಜನರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ನಮ್ಮ ಗ್ಯಾರಂಟಿಗಳ ಬಗ್ಗೆ ಮೋದಿ ಸೇರಿ ವಿಪಕ್ಷಗಳು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಲು ಆಗುವುದಿಲ್ಲ, ಅಭಿವೃದ್ಧಿ ಕಾಮಗಾರಿಗಳಿಗೆ ಹಣವಿಲ್ಲದೆ ರಾಜ್ಯ ದಿವಾಳಿ ಆಗುತ್ತದೆ ಎಂದು ಅಪಪ್ರಚಾರ ಮಾಡಿದ್ದರು. ಗ್ಯಾರಂಟಿ ಯೋಜನೆ ಜಾರಿಯಾದ ಮೇಲೆ ಇಡೀ ಕರ್ನಾಟಕ ತಲಾ ಆದಾಯದಲ್ಲಿ ನಂಬರ್ ಒನ್ ಸ್ಥಾನದಲ್ಲಿ ಇದ್ದೇವೆಂದು ವಿಪಕ್ಷಗಳಿಗೆ ಸಿದ್ದರಾಮಯ್ಯ ಚಾಟಿ ಬೀಸಿದರು.

2006ರಲ್ಲಿ ನಾನು ಕಾಂಗ್ರೆಸ್ ಸೇರಿದ್ದೆ. 2006 ರಿಂದ ಕಾರ್ಯಕರ್ತರು, ಶಾಸಕರು, ಸಂಸದರು ಸೇರಿ ಎಲ್ಲರೂ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅವರಿಗೆಲ್ಲರಿಗೂ ನಾನು ಧನ್ಯವಾದ ಹೇಳುತ್ತೇನೆ. 2013ರಿಂದ 2018ರ ವರೆಗೆ ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದೆ. ಬಳಿಕ 2023ರಿಂದ ಇಲ್ಲಿತವರೆಗೆ ಮುಖ್ಯಮಂತ್ರಿ ಆಗಿದ್ದೆ. ಮುಖ್ಯಮಂತ್ರಿ ಆಗಿದ್ದಾಗ ನನ್ನ ಜೊತೆ ಕೆಲಸ ಮಾಡಿದವರು ಸಹಕರಿಸಿದ್ದರು. ಅಂದು 8 ಜನ ಶಾಸಕರು ನನ್ನ ಜೊತೆ ಕಾಂಗ್ರೆಸ್ ಸೇರಿದ್ದರು, ಅದರಲ್ಲಿ ಕೆಲವರು ಸತ್ತು ಹೋಗಿದ್ದಾರೆ. ಯಾರು ನನ್ನ ಜೊತೆ ಅಂದು ಕಾಂಗ್ರೆಸ್ ಸೇರಿದ್ದರೋ ಅವರಿಗೆ ನಾನು ಚಿರಋಣಿ, ಕೊನೆ ಉಸಿರಿರುವವರೆಗೂ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ಮಾಡುತ್ತೇನೆಂದರು.

ಒಂದು ವೇಳೆ ಸಂವಿಧಾನವಿಲ್ಲದಿದ್ದರೆ ವಿದ್ಯಾವಂತ ಆಗುತ್ತಿರಲಿಲ್ಲ, ಕುರಿ ಮೇಯಿಸಿಕೊಂಡು ಇರುತ್ತಿದ್ದೆ. ಯಾವ ಹುದ್ದೆಯನ್ನೂ ಅಲಂಕರಿಸಲಾಗುತ್ತಿರಲಿಲ್ಲ. ನನ್ನ ತಂದೆ-ತಾಯಿ ಅವಿದ್ಯಾವಂತರು. ಸಂವಿಧಾನಕ್ಕೆ ಯಾರೇ ಧಕ್ಕೆ ತಂದರೂ ಅವರ ವಿರುದ್ಧ ಹೋರಾಡುತ್ತೇನೆಂದು ಹೇಳಿದರು.

### ಎಲ್ಲರೂ ಒಂದು ಕುಟುಂಬದಂತೆ ಇರಬೇಕು



ನಾನು ಹಳ್ಳಿಯಿಂದ ಬಂದವನು. ನಾನು ಶಾಸಕ, ಮುಖ್ಯಮಂತ್ರಿ ಆಗುತ್ತೇನೆಂದು ಅಂದುಕೊಂಡಿರಲಿಲ್ಲ, ರಾಜಕೀಯ ಬಂದಿದ್ದು ಆಕಸ್ಮಿಕ. ನಮ್ಮ ಕುಟುಂಬದಲ್ಲಿ ಯಾರೂ ರಾಜಕೀಯದಲ್ಲಿ ಇರಲಿಲ್ಲ. ರಾಜಕಾರಣಕ್ಕೆ ಬಂದಾಗಿನಿಂದಲೂ ಬುದ್ಧ, ಬಸವ, ಅಂಬೇಡ್ಕರ್, ಗಾಂಧೀಜಿ ತತ್ವ ಆದರ್ಶದಲ್ಲಿ ನಂಬಿಕೆ ಇಟ್ಟುಕೊಂಡವನು. ಸಂವಿಧಾನದಲ್ಲಿ ಅಪಾರ ಗೌರವ ಇಟ್ಟುಕೊಂಡವನು. ಎಲ್ಲರೂ ಕೂಡ ಒಂದು ಕುಟುಂಬದಂತೆ ಇರಬೇಕೆಂದು ಭಾವಿಸಿದ್ದೆ ಎಂದು ಮಾತನಾಡುತ್ತಲೇ ಸಿದ್ದರಾಮಯ್ಯ ಭಾವುಕರಾದರು.

## ಹಾಸನಾಂಬ, ಜೇನುಕಲ್ಲು ಸಿದ್ದೇಶ್ವರಸ್ವಾಮಿ, ನಾಗರನವಿಲೆ, ಕೋಡಿಮಠಕ್ಕೂ ಭೇಟಿ

# ಇಷ್ಟಾರ್ಥ ಸಿದ್ಧಿಗಾಗಿ ಜಿಲ್ಲೆಯ ದೇಗುಲಗಳ ಸುತ್ತಿದ್ದ ಡಿ.ಕೆ.ಶಿ.

• ಪ್ರಜೋದಯ ವರದಿ

**ಹಾಸನ:** ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಸ್ಥಾನಕ್ಕಾಗಿ ಜಿಲ್ಲೆಯ ಹಲವು ದೇವಾಲಯಗಳಿಗೆ ಕಳೆದ ವರ್ಷ ಭೇಟಿ ನೀಡಿ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಪ್ರಾರ್ಥಿಸಿದ್ದರು. ಇದೀಗ ಅವರ ಪ್ರಾರ್ಥನೆಗೆ ಫಲ ಸಿಕ್ಕಿದೆ ಎಂಬ ಚರ್ಚೆಗಳು ನಡೆಯುತ್ತಿವೆ.

ಹಾಸನಾಂಬ ಜಾತ್ರಾ ಮಹೋತ್ಸವದ ವೇಳೆ ಪತ್ನಿ ಜೊತೆ ಆಗಮಿಸಿ ಗರ್ಭಗುಡಿಯಲ್ಲಿ ಕುಳಿತು ಪೂಜೆ ಸಲ್ಲಿಸಿದ್ದರು. ಈ ವೇಳೆ ಬಲಗಡೆಯಿಂದ ಪ್ರಸಾದವಾಗಿತ್ತು. ಇತಿಹಾಸ ಪ್ರಸಿದ್ಧ ಜೇನುಕಲ್ಲು ಸಿದ್ದೇಶ್ವರಸ್ವಾಮಿ, ನಾಗರನವಿಲೆ ದೇವಾಲಯಲಗಳಿಗೂ ಡಿ.ಕೆ. ಶಿವಕುಮಾರ್ ಅವರು ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ್ದರು. ಕೋಡಿಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದು ಭವಿಷ್ಯ ಕೇಳಿದ್ದರು.

**ಜೇನುಕಲ್ಲು ಸಿದ್ದೇಶ್ವರಸ್ವಾಮಿಗೆ ಹರಕೆ**

ಅರಸೀಕೆರೆ ತಾಲ್ಲೂಕಿನ ಯಾದಪುರ ಗ್ರಾಮದಲ್ಲಿರುವ ಶ್ರೀ ಜೇನುಕಲ್ಲು ಸಿದ್ದೇಶ್ವರಸ್ವಾಮಿ



ದೇವಾಲಯ ಭೇಟಿ ನೀಡಿ ಹರಕೆ ಕಟ್ಟಿಕೊಂಡರೆ ಬೇಡಿದ್ದು ಈಡೇರುತ್ತೆ ಎನ್ನುವ ಪ್ರತೀತಿ ಇದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇಲ್ಲಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿ ಹೋದ ನಂತರ ಮುಖ್ಯಮಂತ್ರಿಯಾಗಿದ್ದರು. ಡಿ.ಕೆ.ಶಿವಕುಮಾರ್ ಅವರು ಕೂಡ 2025 ಜು.26 ಜೇನುಕಲ್ಲು ಜೇನುಕಲ್ಲು ಸಿದ್ದೇಶ್ವರಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ್ದರು. ಈ ವೇಳೆ ಬಲಗಡೆಯಿಂದ ಪ್ರಸಾದವಾಗಿದ್ದು, ಶುಭ ಸೂಚನೆ ಸಿಕ್ಕಿತ್ತು. ಬಳಿಕ ನ.21 ರಂದು ಜೇನುಕಲ್ಲು ಸಿದ್ದೇಶ್ವರ ಸ್ವಾಮಿ ಅಡ್ಡಪಲ್ಲಕ್ಕಿಯನ್ನು ಬೆಂಗಳೂರಿನ ತಮ್ಮ ನಿವಾಸಕ್ಕೆ ಕರೆಸಿಕೊಂಡು ಪತ್ನಿ ಜೊತೆ ವಿಶೇಷ ಪೂಜೆ ಸಲ್ಲಿಸಿದ್ದರು.

**ನಾಗರನವಿಲೆಯಲ್ಲಿ ವಿಶೇಷ ಪೂಜೆ**

ಉಪ ಮುಖ್ಯಮಂತ್ರಿ ಆಗಿದ್ದ ಸಂದರ್ಭ ದಲ್ಲೇ ಡಿ.ಕೆ. ಶಿವಕುಮಾರ್ ಅವರು ಜು.23 ರಂದು ಬೆಂಗಾವಲು ವಾಹನವಿಲ್ಲದೆ, ಚನ್ನರಾಯಪಟ್ಟಣ ತಾಲ್ಲೂಕಿನ ನಾಗರನವಿಲೆ ಗ್ರಾಮಕ್ಕೂ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ್ದರು. ನಾಗದೋಷ ನಿವಾರಣೆಗೆ ಪ್ರಸಿದ್ಧಿ ಯಾಗಿರುವ ಬಾಗೂರು ಹೋಬಳಿಯ ಈ ಪುಣ್ಯಕ್ಷೇತ್ರದಲ್ಲಿ ವಿಶೇಷ ಆರಾಧನೆ ನಡೆಸಿದ್ದರು.

ನ.26 ರಂದು ಚನ್ನರಾಯಪಟ್ಟಣ ತಾಲ್ಲೂಕಿನ ಕುಂದೂರು ಮಠದಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕನಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಒತ್ತಾಯಿಸಿದ್ದರು.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಪಟ್ಟಕ್ಕಾಗಿ ಜಿಲ್ಲೆಯ ಪ್ರಮುಖ ಐತಿಹಾಸಿಕ ದೇವಾಲಯಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ್ದು, ಹಾಸನಾಂಬೆ ಹಾಗು ಶ್ರೀ ಜೇನುಕಲ್ಲು ಸಿದ್ದೇಶ್ವರಸ್ವಾಮಿ ಬಲಗಡೆಯಿಂದ ಪ್ರಸಾದ ನೀಡುವ ಮೂಲಕ ನೀಡಿದ ಶುಭ ಸೂಚನೆ ಇದೀಗ ಫಲಿಸುತ್ತಿದ್ದು ಒಂದೆರಡು ದಿನಗಳಲ್ಲಿ ಡಿ.ಕೆ.ಶಿವಕುಮಾರ್ ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುವುದು ನಿಶ್ಚಿತವಾಗಿದೆ.

**ಹಾಸನಾಂಬೆ ಎದುರು ಖಡ್ಗಮಾಲ ಸ್ತೋತ್ರ ಪಠಣ**

2025 ಅಕ್ಟೋಬರ್ 14 ರಂದು ಹಾಸನದ ಅಧಿದೇವತೆ, ಶಕ್ತಿದೇವತೆ, ಬೇಡಿದ್ದನ್ನು ಕರುಣಿಸುವ, ವರ್ಷಕ್ಕೊಮ್ಮೆ ಮಾತ್ರ ಗರ್ಭ ಗುಡಿ ಬಾಗಿಲು ತೆರದು ಭಕ್ತರಿಗೆ ದರ್ಶನ ಕೊಡುವ ಹಾಸನಾಂಬ ದೇವಾಲಯಕ್ಕೆ ಪತ್ನಿ ಜೊತೆ ಆಗಮಿಸಿ ಸುಮಾರು ಅರ್ಧ ಗಂಟೆ ಕಾಲ ಗರ್ಭಗುಡಿಯಲ್ಲಿ ಕುಳಿತು ಖಡ್ಗಮಾಲ ಸ್ತೋತ್ರ ಪಡೆದ ಪಠಿಸಿ ವಿಶೇಷ ಪೂಜೆ ಸಲ್ಲಿಸಿದ್ದರು. ಈ ವೇಳೆ ಹಾಸನಾಂಬ ಬಲಗಡೆಯಿಂದ ಪ್ರಸಾದ ಕರುಣಿ, ಶುಭ ಸೂಚನೆ ನೀಡಲಾಗಿತ್ತು.

**ಕೋಡಿಮಠದಲ್ಲಿ ಭವಿಷ್ಯ ಕೇಳಿದ್ದ ಡಿ.ಕೆ.ಶಿ.**

2025ರ ಜುಲೈ 26ರಂದು ಅರಸೀಕೆರೆಯಲ್ಲಿ ವಿವಿಧ ಕಾಮಗಾರಿಗಳ ಉದ್ಘಾಟನೆ ಕಾರ್ಯಕ್ರಮಕ್ಕೆ ಆಗಮಿಸಿದ ಡಿ.ಕೆ.ಶಿವಕುಮಾರ್ ಅವರು, ಕೋಡಿಮಠಕ್ಕೆ ತೆರಳಿ ಶ್ರೀ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದು ಭವಿಷ್ಯ ಕೇಳಿದ್ದರು. ನಂತರ ಶಿವಲಿಂಗಜ್ಜಯ್ಯ ಹಾಗು ನೀಲಮ್ಮಜ್ಜಯ್ಯ ಗದ್ದುಗೆ ದರ್ಶನ ಮಾಡಿ ವಿಶೇಷ ಪೂಜೆ ಸಲ್ಲಿಸಿದ್ದರು.

# ನಿಮ್ಮ ಪ್ರೀತಿ, ನಂಬಿಕೆಯೇ ನನ್ನ ಶಾಶ್ವತ ಶಕ್ತಿ

## ರಾಜೀನಾಮೆ ಬಳಿಕ ಸಿದ್ದರಾಮಯ್ಯ ಭಾವನಾತ್ಮಕ ಪೋಸ್ಟ್

• ಪ್ರಜೋದಯ ವರದಿ

**ಬೆಂಗಳೂರು:** ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ ನಂತರ ರಾಜ್ಯದ ಜನರು ನೀಡಿದ ಪ್ರೀತಿ ಮತ್ತು ಬೆಂಬಲಕ್ಕಾಗಿ ಧನ್ಯವಾದ ಹೇಳುವ ಭಾವನಾತ್ಮಕ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ.

ಕೃತಜ್ಞತೆಯ ಸೂಚಕವಾಗಿ ವೇದಿಕೆಯ ಮೇಲೆ ಕೈಗಳನ್ನು ಎತ್ತಿ ನಮಸ್ಕರಿಸುವ ಫೋಟೋವೊಂದನ್ನು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಹಂಚಿಕೊಂಡಿದ್ದು, ಧನ್ಯವಾದಗಳು. ನಿಮ್ಮ ಪ್ರೀತಿ. ನಿಮ್ಮ ನಂಬಿಕೆ. ನನ್ನ ಶಾಶ್ವತ ಶಕ್ತಿ ಎಂದು ಬರೆದುಕೊಂಡಿದ್ದಾರೆ.

ನನ್ನನ್ನು ತಮ್ಮಲ್ಲಿ ಒಬ್ಬನೆಂದು ಪರಿಗಣಿಸಿದ, ನನ್ನನ್ನು ಆಶೀರ್ವದಿಸಿದ, ಪ್ರೋತ್ಸಾಹಿಸಿದ, ಸರಿಪಡಿಸಿದ, ಕಷ್ಟದ ಸಮಯದಲ್ಲಿ ನನ್ನೊಂದಿಗೆ ನಿಂತ ಮತ್ತು ಈ ದೀರ್ಘ ಪ್ರಯಾಣದುದ್ದಕ್ಕೂ ನನ್ನ ಕೈ ಹಿಡಿದ ಲಕ್ಷಾಂತರ ಪ್ರೀತಿಯ ಹೃದಯಗಳಿಗೆ ಮುಂದೆ




ತಲೆಬಾಗುತ್ತೇನೆ. ನಾನು ಇಂದು ಏನಾಗಿದ್ದೇನೆಯೋ ಅದಕ್ಕೆ ನೀವೇ ಕಾರಣ ಎಂದಿದ್ದಾರೆ.

ನನ್ನ ನಲವತ್ತೆಂಟು ವರ್ಷಗಳ ರಾಜಕೀಯ ಜೀವನದಲ್ಲಿ ನಾಡಿನ ಅವಕಾಶ ವಂಚಿತ, ಶೋಷಿತ, ಬಡ ಜನರ ಪರವಾಗಿ ಪ್ರಾಮಾಣಿಕವಾಗಿ ದುಡಿದ ಸಂತೃಪ್ತಿಯಿದೆ. ಸಂವಿಧಾನವೇ ನನ್ನ ಧರ್ಮ ಮತ್ತು ಜನರೇ ದೇವರು ಎಂದಿದ್ದು, ಮುಖ್ಯಮಂತ್ರಿ ಹುದ್ದೆಗೆ ಮಾತ್ರ ರಾಜೀನಾಮೆ ನೀಡಿದ್ದೇನೆ. ಸಾರ್ವಜನಿಕ ಜೀವನ ಅಥವಾ ಜನರ ಮೇಲಿನ ಬದ್ಧತೆಗೆ ಅಲ್ಲ ಎಂದು ಹೇಳಿದ್ದಾರೆ.

# ಹೆಚ್.ಡಿ.ದೇವೇಗೌಡರು ಪ್ರಧಾನಿಯಾಗಿ ಮೇ 31ಕ್ಕೆ 30 ವರ್ಷ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಪ್ರಧಾನಿಯಾಗಿ ಮೇ 31ಕ್ಕೆ 30 ವರ್ಷಗಳು ಪೂರ್ಣಗೊಳ್ಳುತ್ತವೆ. ಪ್ರಧಾನಿ ಹುದ್ದೆ ಅಲಂಕರಿಸಿದ ಏಕೈಕ ಕನ್ನಡಿಗ ಎಂಬ ಹೆಗ್ಗಳಿಕೆಗೆ ದೇವೇಗೌಡರು ಪಾತ್ರರಾಗಿದ್ದಾರೆ. 1996ರ ಜೂನ್ ಒಂದರಂದು ಭಾರತದ 11 ಪ್ರಧಾನ ಮಂತ್ರಿಯಾಗಿ ದೇವೇಗೌಡರು ಪ್ರಮಾಣ ವಚನ ಸ್ವೀಕರಿಸಿ 11 ತಿಂಗಳುಗಳ ಕಾಲ ಕಳಂಕ ರಹಿತ ಆಡಳಿತ ನಡೆಸಿದ್ದರು.

ಕಾಂಗ್ರೆಸ್ ಪಕ್ಷವು ತೃತೀಯ ರಂಗಕ್ಕೆ ನೀಡಿದ್ದ ಬೆಂಬಲ ವಾಪಸ್ಸು ಪಡೆದ ಹಿನ್ನೆಲೆಯಲ್ಲಿ ಲೋಕಸಭೆಯಲ್ಲಿ ಬಹುಮತ ಸಾಬೀತಾಗದೇ 1997ರ ಏಪ್ರಿಲ್ 21ರಂದು ಅವರು ಪ್ರಧಾನಿ ಹುದ್ದೆಯಿಂದ ನಿರ್ಗಮಿಸಿದರು.

ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ದೇವೇಗೌಡರಿಗೆ ತಾವು ಬಯಸದೇ ಇದ್ದರೂ ತೃತೀಯ ರಂಗದ ನಾಯಕತ್ವ ವಹಿಸಲು ಮತ್ತು ಪ್ರಧಾನಮಂತ್ರಿ ಗದ್ದುಗೆಗೇರುವ ಅವಕಾಶ 1996ರ ಮೇನಲ್ಲಿ ಒದಗಿ ಬಂದಿತು. ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು 1996ರ ಮೇ 30ರಂದು ಕರ್ನಾಟಕ ಮುಖ್ಯಮಂತ್ರಿ ಹುದ್ದೆಗೆ ದೇವೇಗೌಡರು ರಾಜೀನಾಮೆ ನೀಡಿದ್ದರು.

ಪ್ರಧಾನಿಯಾಗಿ ಜಾರಿಗೆ ತಂದ ತ್ವರಿತ ನೀರಾವರಿ ಯೋಜನೆ ರೈತ ಸಮುದಾಯಕ್ಕೆ ದೊರೆತ ಬಹು ದೊಡ್ಡ ಕೊಡುಗೆಯಾಯಿತು. ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದ ಮಹಿಳಾ ಮೀಸಲಾತಿಯೂ ರಾಷ್ಟ್ರಕ್ಕೆ ಮಾದರಿಯಾಯಿತು. ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ ಜಾರಿಗೆ ತರುವ ಪ್ರಯತ್ನಕ್ಕೆ ನಾಂದಿ ಹಾಡಿತು. ಮುಖ್ಯಮಂತ್ರಿ ಹಾಗೂ ಪ್ರಧಾನ ಮಂತ್ರಿಯಾಗಿ ಮಾಡಿರುವ ಹತ್ತು ಹಲವು ಕಾರ್ಯಗಳು ಜನರ ಮನಸ್ಸಿನಲ್ಲಿವೆ ಎಂದರೆ ತಪ್ಪಾಗಲಾರದು.

ಸಕ್ರಿಯ ರಾಜಕಾರಣಕ್ಕೆ:

ಹೆಚ್.ಡಿ.ದೇವೇಗೌಡರು 1933ರ ಮೇ 18ರಂದು ಕರ್ನಾಟಕದ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿ ಗ್ರಾಮದಲ್ಲಿ ಜನಿಸಿದರು. ಸಿವಿಲ್ ಎಂಜಿನಿಯರಿಂಗ್ ಡಿಪ್ಲೊಮಾ ಪಡೆದಿರುವ ದೇವೇಗೌಡರು 20 ವರ್ಷದ ಯುವಕರಾಗಿದ್ದಾಗಲೇ ಸಕ್ರಿಯ ರಾಜಕಾರಣಕ್ಕೆ ಧುಮುಕಿದರು. 1953ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿ 1962ರ ತನಕ ಆ ಪಕ್ಷದಲ್ಲೇ ಸದಸ್ಯರಾಗಿ ಉಳಿದಿದ್ದರು.

ಮಧ್ಯಮ ವರ್ಗದ ಕೃಷಿಕ ಕುಟುಂಬದ ಹಿನ್ನೆಲೆಯಿಂದ ಬಂದ ಗೌಡರಿಗೆ ರೈತನ ಬದುಕಿನ ಕಷ್ಟಗಳು ಚೆನ್ನಾಗಿ ಅರ್ಥವಾಗಿದ್ದವು. ಯುವ ಗೌಡರು, ಬಡ ರೈತರು, ಸೌಲಭ್ಯ ವಂಚಿತರು ಹಾಗೂ ಸಮಾಜದ ದುರ್ಬಲ ವರ್ಗಗಳ ಒಳಿತಿಗಾಗಿ ತಾವೊಬ್ಬ ಹೋರಾಟಗಾರನಾಗುವುದಾಗಿ ಘೋಷಿಸಿದ್ದರು.

ಪ್ರಜಾಸತ್ತಾತಕ ವ್ಯವಸ್ಥೆಯ ಕೆಳ ಸ್ತರದಿಂದ ಆರಂಭಿಸಿದ ಅವರ ಹೋರಾಟದ ಬದುಕು ರಾಜಕೀಯ ರಂಗದಲ್ಲಿ ಹಂತ ಹಂತವಾಗಿ ಮೇಲೇರಿತು. ಆಂಜನೇಯ ಸಹಕಾರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾಗಲೇ ಬಡಜನರ ಸೇವೆಯಲ್ಲಿ ಜನಪ್ರಿಯರಾಗಿದ್ದರು. ನಂತರ ಗೌಡರು ಹೊಳೆನರಸೀಪುರ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾದರು.



ಸಮಾಜದಲ್ಲಿನ ಅಸಮಾನತೆಗಳನ್ನು ಸರಿಪಡಿಸುವ ಆಶಯದೊಂದಿಗೆ ಸದಾ ಆದರ್ಶ ರಾಜ್ಯವೊಂದರ ಕನಸು ಕಾಣುತ್ತಿದ್ದರು. ಕೇವಲ 28 ವರ್ಷಗಳಿದ್ದಾಗ ಯುವ ದೇವೇಗೌಡರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು ಹಾಗೂ 1962ರಲ್ಲಿ ಕರ್ನಾಟಕ ವಿಧಾನಸಭೆ ಸದಸ್ಯರಾಗಿ ಆಯ್ಕೆಯಾದರು. ವಿಧಾನಸಭೆಯಲ್ಲಿ ಪರಿಣಾಮಕಾರಿ ಭಾಷಣಗಾರರಾಗಿ ಹಿರಿಯರೂ ಸೇರಿದಂತೆ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಹೊಳೆನರಸೀಪುರ ಕ್ಷೇತ್ರದಿಂದ ಸತತ ಮೂರು ಬಾರಿ ವಿಧಾನಸಭೆಗೆ ಚುನಾಯಿತರಾಗಿದ್ದರು.

**ವಿರೋಧ ಪಕ್ಷದ ನಾಯಕ:**

ಮಾರ್ಚ್ 1972 ರಿಂದ ಮಾರ್ಚ್ 1976 ಹಾಗೂ ನವೆಂಬರ್ 1976 ರಿಂದ ಡಿಸೆಂಬರ್ 1977ರವರೆಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಸೇವೆ ಸಲ್ಲಿಸಿ ಗೌಡರು ಮೆಚ್ಚುಗೆಗೆ ಪಾತ್ರರಾದರು. ನೀರಾವರಿ ಸಚಿವರಾಗಿದ್ದ ಅವಧಿಯಲ್ಲಿ ಅನೇಕ ನೀರಾವರಿ ಯೋಜನೆಗಳು ಅನುಷ್ಠಾನಗೊಂಡವು. ನೀರಾವರಿಗೆ ಸಾಕಷ್ಟು ಹಣಕಾಸು ಮಂಜೂರಾತಿ ನೀಡದಿದ್ದನ್ನು ಪ್ರತಿಭಟಿಸಿ 1987ರಲ್ಲಿ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿದರು.

ಸ್ವಾತಂತ್ರ್ಯ ಮತ್ತು ಸಮಾನತೆಯ ಹರಿಕಾರರಾದ ಅವರು 1975-76ರಲ್ಲಿ ಕೇಂದ್ರ ಸರ್ಕಾರದ ಮೇಲೆ ಆಕ್ರೋಶಗೊಂಡರು ಹಾಗೂ ತುರ್ತು ಪರಿಸ್ಥಿತಿಯ ದಿನಗಳಲ್ಲಿ ಜೈಲು ವಾಸ ಅನುಭವಿಸಿದರು. ದೇವೇಗೌಡರು ಈ ಅವಧಿಯಲ್ಲಿ ಹೆಚ್ಚು ಕಾಲ ಓದುವುದರಲ್ಲಿ ತೊಡಗಿ ತಮ ಜ್ಞಾನವನ್ನು ಇನ್ನಷ್ಟು ಸಮೃದ್ಧಗೊಳಿಸಿದರು. ನಿರಂತರ ಓದುವಿಕೆ ಹಾಗೂ ಆ ಅವಧಿಯಲ್ಲಿ ಕಾರಾಗೃಹದಲ್ಲಿದ್ದ ಭಾರತೀಯ ರಾಜಕಾರಣದ ಇತರ ಮುತ್ಸದ್ದಿಗಳ ಒಡನಾಟವು ಅವರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ನೆರವಾಯಿತು. ಬಂಧಮುಕ್ತರಾದ ನಂತರ ಅವರು ಸದೃಢ ವ್ಯಕ್ತಿಯಾಗಿ ಹೊರ ಹೊಮ್ಮಿದರು.

**ಲೋಕಸಭೆಯಲ್ಲಿ ರೈತಪರ ದನಿ:**

1991ರಲ್ಲಿ ಹಾಸನ ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದ ಅವರು ವಿಶೇಷವಾಗಿ ರೈತರು ಒಳಗೊಂಡಂತೆ ರಾಜ್ಯದ ಸಮಸ್ಯೆಗಳನ್ನು ಪ್ರಸ್ತಾಪಿಸುವಲ್ಲಿ ಮುಂಚೂಣಿಯಲ್ಲಿದ್ದರು. ಸಂಸತ್‌ನಲ್ಲಿ ರೈತರ ಬವಣೆ ಮತ್ತು ಸಂಕಷ್ಟಗಳ ಮೇಲೆ ಬೆಳಕು ಚೆಲ್ಲಿ ಕೃಷಿಕರ ದನಿಯಾದರು. ಸಂಸತ್ ಮತ್ತು ಅದರ ಸಂಸ್ಥೆಗಳ ಘನತೆ ಮತ್ತು ಗೌರವಗಳನ್ನು ಎತ್ತಿ ಹಿಡಿಯುವಲ್ಲಿಯೂ ಸಹ ಗೌಡರು ಹೆಸರು ಮಾಡಿದರು.

**ಕರ್ನಾಟಕದ 14ನೇ ಮುಖ್ಯಮಂತ್ರಿ:**

ದೇವೇಗೌಡರು 1994ರಲ್ಲಿ ರಾಜ್ಯ ಜನತಾದಳದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.1994ರಲ್ಲಿ ರಾಜ್ಯದಲ್ಲಿ ಜನತಾದಳವು ಅಧಿಕಾರಕ್ಕೆ ಬರುವಲ್ಲಿ ಗೌಡರು ಮಹತ್ವದ ಪಾತ್ರ ವಹಿಸಿದ್ದರು. 1994ರ ಡಿಸೆಂಬರ್ 11ರಂದು ಗೌಡರು ಜನತಾದಳ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿ ಕರ್ನಾಟಕದ 14ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ರಾಮನಗರ ವಿಧಾನಸಭಾ ಕ್ಷೇತ್ರದಿಂದ ಜನತಾದಳದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು.

ತಮ್ಮ ಸಕ್ರಿಯ ರಾಜಕಾರಣ ಮತ್ತು ಬೇರುಮಟ್ಟದ ಭದ್ರ ಬುನಾದಿಯಿಂದಾಗಿ ರಾಜ್ಯ ಎದುರಿಸುತ್ತಿದ್ದ ಅನೇಕ ಸಮಸ್ಯೆಗಳನ್ನು ನಿಭಾಯಿಸುವ ಹೊಣೆಯನ್ನು ನೇರವಾಗಿ ಕೈಗೆತ್ತಿಕೊಂಡರು. ಹುಬ್ಬಳ್ಳಿಯ ಈದ್ಗಾ ಮೈದಾನ ವಿವಾದಕ್ಕೆ ಗೌಡರು ಶಾಂತಿಯುತ ಪರಿಹಾರ ಕಂಡುಕೊಳ್ಳುವಲ್ಲಿ ಯಶಸ್ವಿಯಾದರು.

**ವಿದೇಶಿ ಬಂಡವಾಳ :**

1995ರಲ್ಲಿ ದೇವೇಗೌಡರು ಸ್ವಿಟ್ಜರ್ಲೆಂಡ್‌ಗೆ ಪ್ರವಾಸ ಕೈಗೊಂಡು, ಅಂತಾರಾಷ್ಟ್ರೀಯ ಆರ್ಥಿಕ ತಜ್ಞರ ಸಮಾವೇಶದಲ್ಲಿ ಪಾಲ್ಗೊಂಡರು. ಯೂರೋಪ್ ಮತ್ತು ಮಧ್ಯಪೂರ್ವ ರಾಷ್ಟ್ರಗಳಿಗೆ ಇವರು ಕೈಗೊಂಡ ಪ್ರವಾಸವು ಓರ್ವ ಸಮರ್ಪಣಾ ಮನೋಭಾವದ ರಾಜಕಾರಣಿಯ ಸಾಧನೆಗಳಿಗೆ ಸಾಕ್ಷಿಯಾಗುತ್ತದೆ. ಅವರ ಸಿಂಗಾಪುರ ಪ್ರವಾಸವು ರಾಜ್ಯಕ್ಕೆ ತುಂಬಾ ಅಗತ್ಯವಾದ ವಿದೇಶಿ ಬಂಡವಾಳವನ್ನು ತರುವಲ್ಲಿ ಯಶಸ್ವಿಯಾಗಿದ್ದು, ಅದು ಅವರ ವ್ಯಾವಹಾರಿಕ ಜಾಣೆಯನ್ನು ಸಾಬೀತುಪಡಿಸುತ್ತದೆ.

1989ರಲ್ಲಿ ದೇವೇಗೌಡರು ಸ್ಪರ್ಧಿಸಿದ ಎರಡು ಕ್ಷೇತ್ರಗಳಲ್ಲಿ ಪರಾಭವಗೊಂಡು ತಮ ರಾಜಕೀಯ ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ಸೋಲಿನ ರುಚಿ ಕಂಡರು. ಸದಾ ಚಟುವಟಿಕೆಯಿಂದ ಇರುತ್ತಿದ್ದ ಅವರು ಶಾಸನಸಭೆಯ ಗ್ರಂಥಾಲಯ ದಲ್ಲಿ ಪುಸ್ತಕಗಳು ಮತ್ತು ನಿಯತಕಾಲಿಕಗಳನ್ನು ತಿರುವಿ ಹಾಕುತ್ತಿದ್ದರು.1967ರಲ್ಲಿ ನಡೆದ ಮರು ಚುನಾವಣೆ ಅವರಿಗೆ ಹೆಚ್ಚು ವಿಶ್ವಾಸ ನೀಡಿತು ಹಾಗೂ 1969ರಲ್ಲಿ ಕಾಂಗ್ರೆಸ್ ಪಕ್ಷವು ಇಬ್ಭಾಗವಾದಾಗ, ನಿಜಲಿಂಗಪ್ಪ ನೇತೃತ್ವದ ಕಾಂಗ್ರೆಸ್ (ಒ) ಪಕ್ಷವನ್ನು ಸೇರಿದರು. ಆ ಪಕ್ಷ ಕರ್ನಾಟಕದಲ್ಲಿ ಅಧಿಕಾರದಲ್ಲಿತ್ತು. ಆದರೆ, ಗೌಡರು 1971ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ (ಒ) ಪಕ್ಷದ ಗೆಲುವಿನ ಬಳಿಕ ಇಂದಿರಾಗಾಂಧಿ ಅವರ ಅಲೆಯನ್ನು ಮೊಟಕುಗೊಳಿಸುವ ಪ್ರತಿಪಕ್ಷದ ಓರ್ವ ನಾಯಕರಾಗಿ ಹೊರಹೊಮಿದರು. 93 ವಸಂತಗಳನ್ನು ಪೂರ್ಣಗೊಳಿಸಿ 94ನೇ ವಸಂತಕ್ಕೆ ಪಾದಾರ್ಪಣೆ ಮಾಡಿರುವ ಅವರು, ಈಗಲೂ ರಾಜಕೀಯದಿಂದ ದೂರ ಸರಿದಿಲ್ಲ.

# ಡಾಲಾ ಹಾರ್ಸ್ ಎಂಬ ಉಡುಗೊರೆ

-ಕೆ.ಪಿ.ಅಶ್ವಿನ್ ರಾವ್



ಗೃಹ ಪ್ರವೇಶ, ಹುಟ್ಟು ಹಬ್ಬ, ಮದುವೆ, ಉಪನಯನ, ವಾರ್ಷಿಕೋತ್ಸವ ಇತ್ಯಾದಿ ಶುಭ ಕಾರ್ಯಕ್ರಮಗಳಿಗೆ ಹೋಗುವಾಗ ಏನು ಉಡುಗೊರೆ ನೀಡುವುದು ಎನ್ನುವುದು ಎಲ್ಲರಿಗೂ ಅನಿಸುವುದಿದೆ. ಹಲವರು ಏನಾದರೂ ಕೊಡಬೇಕಲ್ಲಾ ಎಂದು ಅಗತ್ಯಕ್ಕೆ ಬೀಳದ ವಸ್ತುಗಳನ್ನು ನೀಡಿದ್ದೂ ಇದೆ. ಈ ಉಡುಗೊರೆ ನೀಡುವ ಸಂಪ್ರದಾಯ ಭಾರತದಲ್ಲಿ ಮಾತ್ರವಲ್ಲ ವಿದೇಶ ದಲ್ಲೂ ಇದೆ. ಹೂವಿನ ಬೊಕೆ, ಅಲಂಕಾರಿಕ ವಸ್ತುಗಳು ಇವೆಲ್ಲಾ ಅಲ್ಲಿ ಸಾಮಾನ್ಯ ಉಡು ಗೊರೆಯ ವಸ್ತುಗಳು. ಸ್ವೀಡನ್ ದೇಶದವರು ಮಾತ್ರ ಡಾಲಾ ಕುದುರೆ ಅಥವಾ ಡಲೆಕಾರ್ಲಿ ಯನ್ ಹಾರ್ಸ್ ಎನ್ನುವ ವಸ್ತುವನ್ನು ಉಡುಗೊರೆಯಾಗಿ ನೀಡುವ ಸಂಸ್ಕೃತಿಯನ್ನು ಬೆಳೆಸಿ ಕೊಂಡು ಬಂದಿದ್ದಾರೆ.

ಏನಿದು ಡಾಲಾ ಹಾರ್ಸ್? ಹಾರ್ಸ್ ಎಂದರೆ ಕುದುರೆ ಎನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಹಾಗಾದರೆ ಸ್ವೀಡನ್ ದೇಶದಲ್ಲಿ ಸಮಾರಂಭಗಳಿಗೆ ಉಡುಗೊರೆಯಾಗಿ ಕುದುರೆಯನ್ನು ಕೊಡುತ್ತಾರಾ? ಎಂದು ಅಚ್ಚರಿ ಪಡಬೇಡಿ. ಈ ಡಾಲಾ ಹಾರ್ಸ್ ಎಂದರೆ ಮರದ ಕಟ್ಟಿಗೆಯಲ್ಲಿ ಕೊರೆದು ಬಣ್ಣ ಬಳಿದ ಕುದುರೆಯ ಆಕೃತಿ. ನಮ್ಮ ಚನ್ನಪಟ್ಟಣದ ಗೊಂಬೆಯ ರೀತಿಯದ್ದು ಅನ್ನಬಹುದು. ಹೆಚ್ಚಾಗಿ ಈ ಮರದ ಕಟ್ಟಿಗೆಯ ಕುದುರೆಯ ಬಣ್ಣ ಕೆಂಪು ಆಗಿರುತ್ತದೆ. ಸಮಯ ಕಳೆದಂತೆ ಈಗಿನ ತಲೆಮಾರು ಕಿತ್ತಳೆ, ಬಿಳಿ, ಹಸಿರು, ನೀಲಿ ಹಾಗೂ ಹಳದಿ ಬಣ್ಣದ ಕುದುರೆ ಆಕೃತಿಯನ್ನೂ ಉಡುಗೊರೆಯಾಗಿ ನೀಡಲು ಪ್ರಾರಂಭಿಸಿದ್ದಾರೆ. ಆದರೂ ಕೆಂಪು ಬಣ್ಣದ ಕುದುರೆಯ ಗೊಂಬೆಗೇ ಹೆಚ್ಚಿನ ಬೇಡಿಕೆ.

ಈ ಡಾಲಾ ಕುದುರೆಯನ್ನು ಉಡುಗೊರೆಯಾಗಿ ಕೊಡುವ ಸಂಸ್ಕೃತಿ ಸ್ವೀಡನ್‌ನಲ್ಲಿ ಸುಮಾರು 17ನೇ ಶತಮಾನದಲ್ಲಿ ಚಾಲ್ತಿಗೆ ಬಂತು ಎಂದು ಇತಿಹಾಸಕಾರರು ಹೇಳುತ್ತಾರೆ. ಆದರೆ ಸರಿ ಯಾದ ವರ್ಷ ತಿಳಿಯದೇ ಇದ್ದರೂ ಮಧ್ಯ ಸ್ವೀಡನ್‌ನ ಬರ್ಗ್ ಕರ್ಲಾಸ್ ಎನ್ನುವ ಗ್ರಾಮದಲ್ಲಿ ಈ ಬಗೆಯ ಕೆತ್ತನೆಯನ್ನು ಸುಮಾರು 1623ರಲ್ಲಿ ಪ್ರಾರಂಭಿಸಿದರು ಎನ್ನಲಾಗುತ್ತದೆ. ಈ ಗ್ರಾಮ ಪೀಠೋಪಕರಣ ತಯಾರಿಕೆಗೆ ಹೆಸರುವಾಸಿಯಾಗಿತ್ತು. ಇವರು ತಮ್ಮ ಎಲ್ಲಾ ಕೆತ್ತನೆಯ ಕೆಲಸ ಮುಗಿದ ಬಳಿಕ ಉಳಿದ ಮರದ ತುಂಡುಗಳಲ್ಲಿ ಈ ಬಗೆಯ ಕುದುರೆಯ ಆಕೃತಿಗಳನ್ನು ಕೆತ್ತಿ ಅದಕ್ಕೆ ಅಲಂಕಾರ ಮಾಡುತ್ತಿದ್ದರು. ಅದರಲ್ಲಿ ಅತಿ ಸಣ್ಣ ಗಾತ್ರದಿಂದ ಹಿಡಿದು ವಿವಿಧ ಗಾತ್ರಗಳ ಕುದುರೆಯ ಆಕೃತಿ ಇರುತ್ತಿತ್ತು. ಕ್ರಮೇಣ ಈ ಕುದುರೆಯ ಕಲಾಕೃತಿಗಳು ಖ್ಯಾತಿ ಯನ್ನು ಪಡೆದವು. ಅವುಗಳ ಖ್ಯಾತಿ ಬರ್ಗ್ ಕರ್ಲಾಸ್ ಗ್ರಾಮದ ಹತ್ತಿರದ ವಟ್ನಾಸ್, ನುಸ್ನಾನ್ ಹಾಗೂ ರಿಸಾ ಗ್ರಾಮಗಳಿಗೂ ತಲುಪಿತು. ಅಲ್ಲಿಯ ಕುಶಲ ಕರ್ಮಿಗಳೂ ಇಂತಹ ಕುದುರೆ ಗಳನ್ನು ತಯಾರು ಮಾಡಲು ಪ್ರಾರಂಭಿಸಿದರು.

1716ರಲ್ಲಿ ಈ ಡಾಲಾ ಹಾರ್ಸ್ ಆಕೃತಿಗಳನ್ನು ರಾಷ್ಟ್ರೀಯ ಆಟಿಕೆಗಳೆಂದು ಘೋಷಿಸಲಾ ಯಿತು. ಮಕ್ಕಳಿಗೆ ಅಚ್ಚುಮೆಚ್ಚಾಗಿರುವ ಈ ಡಾಲಾ ಹಾಸ್ ರ್ಗೆ ಬಹು ಬೇಡಿಕೆ ಇದೆ. 20ನೇ ಶತಮಾನದ ಹೊತ್ತಿಗೆ ಈ ಡಾಲಾ ಹಾಸ್ ರ್ಗಳಿಗೆ ವಿಶ್ವದಾದ್ಯಂತ ಮಾರುಕಟ್ಟೆ ಸೃಷ್ಟಿಯಾಗುತ್ತದೆ. ವಿಶ್ವದಲ್ಲೇ ಅತೀ ದೊಡ್ಡ ಡಾಲಾ ಹಾರ್ಸ್ ಸ್ವೀಡನ್ ದೇಶದಲ್ಲೇ ಇದೆ. ಅದು ಅವೆಸ್ತಾ ಎನ್ನುವ ನಗರದಲ್ಲಿದೆ. ಅದರ ಎತ್ತರ 42 ಅಡಿ 7 ಇಂಚು ಹಾಗೂ ಉದ್ದ 42 ಅಡಿಗಳಷ್ಟಿದೆ. ಡಾಲಾ ಹಾರ್ಸ್ ಮನೆಯಲ್ಲಿರುವುದು ಶುಭ ಸಂಕೇತ ಎಂದು ಸ್ವೀಡನ್ ಜನರು ನಂಬಿದ್ದಾರೆ. ಈ ಕಾರಣಕ್ಕೆ ಅವರು ತಮ್ಮ ಆತ್ಮೀಯರಿಗೆ ಡಾಲಾ ಹಾರ್ಸ್ ಗಳನ್ನು ಉಡುಗೊರೆಯಾಗಿ ನೀಡುತ್ತಾ ಬಂದಿದ್ದಾರೆ.

# ನಾ ತಂದಿನಿ ನಿನ್ನ ನನ್ನನ್ಯಾಕ ನೋಡತಿ ಹೊಳ್ಳೊಳ್ಳಿ

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 51 ಕೃತಿಗಳನ್ನು ಪ್ರಕಟಿಸಿರುವ ಡಾ.ಪ್ರಕಾಶ್ ಗ. ಖಾಡೆ ವಿದ್ಯಾರ್ಥಿ ದೆಸೆಯಲ್ಲಿಯೇ 1986ರಲ್ಲಿ ಗೀತ ಚಿಗಿತ ಸಂಪಾದಿತ ಕವನ ಸಂಕಲನದಿಂದ ಇತ್ತೀಚಿನ ಬಾಳುಕನ ಪುರಾಣ ಕಥಾ ಸಂಕಲನದವರಗೂ ದಣಿವರಿಯದೇ ಬರೆಯುತ್ತಿದ್ದಾರೆ. ಅವರು ಮತ್ತು ಶಂಕರ ಬೈಚಬಾಳ ಇರ್ವರೂ ನನಗೆ ಪರಿಚಿತವಾದದ್ದು 2008ರಲ್ಲಿ ನಡೆದ ಮೈಸೂರು ದಸರಾ ಕವಿಗೋಷ್ಠಿಯಲ್ಲಿ. ಹಿಂದಿನ ರಾತ್ರಿ ನಾವು ಮೂವರು ಒಂದೇ ರೂಮಿನಲ್ಲಿ ಉಳಿದುಕೊಂಡಿದ್ದೆವು. ಮಾತು ಪರಿಚಯ ಸ್ನೇಹಕ್ಕೆ ತಿರುಗಿ ನಾನು ಆಗತಾನೇ (2007) ಪ್ರಕಟವಾಗಿದ್ದ ನನ್ನ ಕಾವೇರಿ ನದಿಯ ದಡದಲ್ಲಿ ಕೃತಿ ನೀಡಿದೆ. ಎಂ.ಎಸ್.ವೆಂಕಟರಾಮಯ ಬರೆದ ಮುನ್ನುಡಿ ಮೇಲೆ ಕಣ್ಣಾಡಿಸಿದರು ಖಾಡೆ.

ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ.. ಎಂದು ಕವಿ ವರ್ಣಿಸಿದ ರಮಣೀಯ ನಿಸರ್ಗ ಸೌಂದರ್ಯದ ಬೀಡಾದ ಕೊಡಗಿನ ಪಶ್ಚಿಮ ಘಟ್ಟ ಭಾಗವಾದ ಬ್ರಹ್ಮಗಿರಿಯ ತಪ್ಪಲಿನಲ್ಲಿ ತಲಕಾವೇರಿ ಎಂಬಲ್ಲಿನ ಬ್ರಹ್ಮಕುಂಡಿಕೆಯಲ್ಲಿ ಚಿಮ್ಮಿ ಉದ್ಭವವಾಗಿ ಮುಂದೆ ಹೊರಳಿ ಹರಿದು ಕರ್ನಾಟಕ ತಮಿಳುನಾಡು ರಾಜ್ಯಗಳಲ್ಲಿನ ಸುಮಾರು 802 ಕಿ.ಮೀ. ದೂರ ಕ್ರಮಿಸಿ ಬಂಗಾಳಕೊಲ್ಲಿ ಸೇರುವ ಕಾವೇರಿ ನದಿಯ ರೋಚಕತೆಯೇ ಕಾವೇರಿ ನದಿಯ ದಡದಲ್ಲಿ. ಲೇಖಕಮಿತ್ರ ಶ್ರೀ ಗೊರೂರು ಅನಂತರಾಜು ಈ ಕೃತಿಯನ್ನು ಅಧ್ಯಯನ ಯೋಗ್ಯ ಕೃತಿಯಷ್ಟೇ ಅಲ್ಲದೇ ಪ್ರವಾಸಿಗರ ಉತ್ತಮ ಕೈಪಿಡಿಯಾಗುವಂತೆ ರಚಿಸುವಲ್ಲಿ ಬಹಳ ಶ್ರಮ ವಹಿಸಿದ್ದಾರೆ... ಅನಂತರಾಜ್ ಸರ್, ನಾವು ಕವಿಗೋಷ್ಠಿ ಮುಗಿಸಿ ಬೆಳಿಗ್ಗೆ ತಲಕಾವೇರಿಗೆ ಹೋಗಿ ಬರೋಣವೇ ಎಂದು ಅಭಿಲಾಶೆ ವ್ಯಕ್ತಪಡಿಸಿದರು. ಸರಿ ನಾವು ತಲಕಾಡಿಗೆ ಪ್ರವಾಸ ಹೊರಟೆವು. ಅಲ್ಲಿಯ ರಮ್ಯ ಸೌಂದರ್ಯ ನೋಡಿ ಕವಿಗಳೀರ್ವರು ಖುಷಿಯಾದರು. ಹೋಗ್ತ ಖಾಡೆ ತಮ್ಮ ಕೃಷ್ಣಾತೀರದ ಜನಪದ ಒಗಟುಗಳು ಕೃತಿ ಕೊಟ್ಟರು. ಒಗಟುಗಳು ಸಾಹಿತ್ಯಕ ಮೌಲ್ಯವನ್ನು ಒಳಗೊಂಡ ಜನಪದ ಸಾಹಿತ್ಯದ ಶ್ರೇಷ್ಠ ರಚನೆಗಳಾಗಿವೆ. ಭಾವ ಹೆಪ್ಪುಗಟ್ಟಿ ಗೀತೆಯಾಗುವಂತೆ, ಭಾವ ಬುದ್ಧಿಗಳ ರಸಾಯನದಿಂದ ಗಾದೆಯಾಗುವಂತೆ, ಬುದ್ಧಿ ಹೆರಳ ಗೊಂಡು ಒಗಟಾಗುತ್ತದೆ. ಒಗಟು ಎಂದರೆ ಜಟಿಲ ವಾದದ್ದು, ಗೋಜಲು ಗೋಜಲಾದದ್ದು, ಗೂಢವಾದದ್ದು, ಬುದ್ಧಿ ಪ್ರತಿಭೆಗಳ ಸಂಯೋಜಿತ ಸೃಷ್ಟಿಯಾದ ಸೃಷ್ಟಿಯಾದ ಸೌಂದರ್ಯ ಕಾರ್ಯಕಾರಣ ತರ್ಕ ಶಕ್ತಿಗಳ ನ್ನೊಳಗೊಂಡ, ಸಿಪ್ಪೆ ಸುಲಿಯುತ್ತಾ ತಿರುಳಿನ ನೆಡೆಗೆ ಸೆಳೆಯುವ ಅರ್ಥಾಪೇಕ್ಷಿಯಾದ ಪದ ಚಕ್ರವ್ಯೂಹವೇ ಒಗಟು.




ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ನವೋದಯ ಕಾವ್ಯದ ಮೇಲೆ ಜಾನಪದದ ಪ್ರಭಾವ ಕುರಿತ ಪಿಹೆಚ್.ಡಿ ಪ್ರಬಂಧಕ್ಕೆ ಡಾಕ್ಟರೇಟ್ ಪಡೆದಿರುವ ಡಾ.ಪ್ರಕಾಶ್ ಗ. ಖಾಡೆ ಕೃಷ್ಣ ನದಿ ತೀರದ ಹಳ್ಳಿಗಳಲ್ಲಿ ಹತ್ತಾರು ವರ್ಷ ಸುತ್ತಾಡಿ ಬೀಸುಕಲ್ಲಿನ ಮುಂದೆ ಕುಳಿತು ಹಾಡು ಹೇಳುತ್ತ ಬೆಳಗು ಮುಂಜಾನೆ ಅರ್ಧ ಚೀಲ ಜೋಳ ಬೀಸಿದರೂ ಕಾಳ ಮುಗಿದವ ನಮ್ಮ ಹಾಡು ಮುಗಿಲಿಲ್ಲ ಎಂಬಂತೆ ನಾವೆಷ್ಟೇ ಸಂಗ್ರಹಿಸಿದರೂ ಇನ್ನು ಉಳಿದುಕೊಂಡೆ ಇರುವ ಜಾನಪದ ಸಂಪತ್ತಿನ ಒಂದು ಭಾಗವಾಗಿರುವ ಕೃಷ್ಣ ತೀರದ ಜನಪದ ಒಗಟುಗಳು ಕೃತಿಯಲ್ಲಿ 305 ಒಗ ಟುಗಳನ್ನು 12 ಒಡಗತೆಗಳನ್ನು ಸಂಗ್ರಹಿಸಿದ್ದಾರೆ. ಒಗಟುಗಳು ಸಾಹಿತ್ಯಕ ಮೌಲ್ಯವನ್ನು ಒಳಗೊಂಡ ಜನಪದ ಸಾಹಿತ್ಯದ ಶ್ರೇಷ್ಠ ರಚನೆಗಳಾಗಿವೆ. ಒಗಟು ಪರಿಭಾವಿಸಿದಷ್ಟೂ ಅರ್ಥಪರೆ ಬಿಚ್ಚಿಕೊಳ್ಳುವ ಗುಣ ವಿಶೇಷದಿಂದ ಶ್ರೇಷ್ಠಕಾವ್ಯದ ನಿಲುವಿಗೇರುವ ಅಂಶಗಳನ್ನೂ ಹೊಂದಿವೆ. ಇಲ್ಲಿ ಮುಖ್ಯವಾದ ಸಂಗತಿಯೆಂದರೆ ಒಗಟು ರೂಪಕ ಮೂಲವಾದದ್ದು. ಈ ಗುಣದಿಂದಲೇ ಅದು ಧ್ವನಿಪೂರ್ಣವಾಗುತ್ತದೆ. ಧ್ವನಿ ಸಂಕ್ಷಿಪ್ತತೆಗೆ ಸಾಧನವಾದ ಸಾಂಕೇತಿಕತೆಯನ್ನು ಅರಸು ತ್ತದೆ. ಹೀಗೆ ಸಾಂಕೇತಿಕತೆಯಲ್ಲಿ ಅಭಿವ್ಯಕ್ತಿಗೊಂಡ ಸಂಕ್ಷಿಪ್ತ ಕಾವ್ಯವೇ ಒಗಟು.

ನಾ ತಂದಿನಿ ನಿನ್ನ ನನ್ನನ್ಯಾಕ ನೋಡತಿ ಹೊಳ್ಳೊಳ್ಳಿ.. ಉತ್ತರ ಕರ್ನಾಟಕ ಭಾಷಾ ಸೊಗಡಿನ ಒಗಟಿಗೆ ಉತ್ತರ ಹುಡುಕುತ್ತಾ ಹೊರಟಲ್ಲಿ ಹೊಳೆದಿದ್ದು 'ಕನ್ನಡಿ'ಯಲ್ಲಿ. ಸ್ವತ: ಕವಿಯಾಗಿ ಪ್ರೀತಿ ಬಟ್ಟಳು ಕವನ ಸಂಕಲನ ಪ್ರಕಟಿಸಿರುವ ಪ್ರಕಾಶ ಗ.ಖಾಡೆ ಅವರ ಈ ಕೃತಿಗೆ ಗಂಗಮ್ಮ ಸೋಮಪ್ಪ ಬೊಮ್ಮಾಯಿ (ಹುಬ್ಬಳ್ಳಿ) ಪ್ರತಿಷ್ಠಾನವು ಜಾನಪದ ಸಿರಿ ಪ್ರಶಸ್ತಿ ನೀಡಿದೆ. ಹಿರಿ ಹೊಳಿ ಎಂದೇ ಜನಪದದಲ್ಲಿ ರೂಢಿಗತವಾಗಿರುವ ಕೃಷ್ಣಾ ನದಿ ಉತ್ತರ ಕರ್ನಾಟಕದ ಜೀವನಾಡಿ. ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಮಹಾಬಲೇಶ್ವರದಲ್ಲಿ ಉಗಮಿಸಿ ಕರ್ನಾಟಕ ರಾಜ್ಯದ ಬೆಳಗಾವಿ, ಬಾಗಲಕೋಟೆ, ವಿಜಾಪುರ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಪ್ರವಹಿಸುತ್ತಿ ರುವ ಕೃಷ್ಣಾ ತೀರದ ಪ್ರದೇಶಗಳಲ್ಲಿ ಜಾನಪದದ ಸಿರಿ ಸೊಬಗು ತುಂಬಿ ತುಳುಕುತ್ತಿದೆ. ಜಾತ್ರೆ ಉತ್ಸವ ಹಬ್ಬ ಹರಿದಿನಗಳಲ್ಲಿ, ಜನರ ಧಾರ್ಮಿಕ ಆಚರಣೆ ನಡೆ ನುಡಿಗಳಲ್ಲಿ ಜಾನಪದದ ಒಡಲು ಬರಿದಾದುದೆ ಇಲ್ಲ. ಒಗಟು ಕೂಡ ಅಷ್ಟೇ. ಅಡ್ಡ ಬಡ್ಡ ಬಿದರ ಸೀಳಿ ಅವರ ಮನಿಕಡ್ಡಿ ಮ್ಯಾಲ ಅಂತರಂಗದ ಗುಡಿ. ಅರಕಟ್ಟಿ, ಮರಕಟ್ಟಿ ಸುತ್ತಲ ಹಳ್ಳಿಕಟ್ಟಿ ಸೂಳಿಭಾವಿ ಕಟ್ಟ ಇದನ್ನು ಒಡದವರಿಗೆ ಬಂಗಾರದ ಕಟ್ಟಿ, ಒಡೆಯಲ್ಲದವರಿಗೆ ಚಪ್ಪಲ ಜೋಡ ಕಟ್ಟಿ. ಈ ಎರಡೂ ಒಗಟು ಗಳಿಗೂ ಉತ್ತರ ತೇರು, ಊಹೆಯಿಂದ ಬಿಡಿಸಬೇಕಾದ ಹಾಸ್ಯ ವಿಡಂಬನೆ, ಭಾಷೆ ಹಾಗೂ ಸಾಹಿತ್ಯ ಸೌಂದರ್ಯದ ಅಂಶಗಳನ್ನು ರೂಢಿಸಿಕೊಂಡ ಒಗಟು ಎಲ್ಲಾ ವಯೋಮಾನದಲ್ಲೂ ಉಳಿದುಕೊಂಡು ಬಂದಿವೆ. ಮಕ್ಕಳಿಗೆ ಪ್ರಿಯವಾಗುವ ಒಗಟುಗಳು ಮಾನಸಿಕ ಶೈಸವಾವಸ್ಥೆಯ ನಿಗೂಢತೆಗಳೂ ಹೌದು ವಿವೇಚನೆಯೂ ಹೌದು. ಒಗಟು ಸಂಗ್ರಹದೊಂದಿಗೆ ಒಗಟು ಹೇಳಿದ ವರ ಹೆಸರು ವಿಳಾಸ ನೀಡಿ ಗ್ರಾಮ್ಯ ಪದಗಳಿಗೆ ಅರ್ಥಕೋಶವನ್ನು ಲೇಖಕರು ಕೊಟ್ಟಿದ್ದಾರೆ. ಡಜನ್ ಒಡಗತೆಯಲ್ಲಿ ಹೀಗೊಂದು ಒಂದ ಮುದುಕಿ ಮನಿಗೆ ಒಬ್ಬಾಕಿ ಹಿಂಡಿ ಬೇಡಾಕ ಬಂದ್ಲು. ಆಗ ಮುದುಕಿ ಮನಿಗಿ ಮತ್ತೊಬ್ಬ ಹಾಲು ಬೇಡಾಕ ಬಂದ. ಇಬ್ಬರಿಗೂ ಒಂದ ಉತ್ತರ.. ಹಿಂಡಿಲ್ಲಾ. ಒಗಟು ಮತ್ತು ಒಡತೆಗಳು ಟೈಂಪಾಸ್ ಕಡ್ಲೆಕಾಯಿಯಂತೆ ಪ್ರಿಯವಾಗುತ್ತವೆ.

**-ಗೊರೂರು ಅನಂತರಾಜು, ಹಾಸನ.**

# ಏಕಾಂತದ ಬೆಳೆ

ಗುರುವಿನ ಕಠೋರ ಮಾತುಗಳು ಶಿಷ್ಯನಿಗೆ ವೇದನೆಯಾಯಿತು. ತಾನು ಮಾಡಿದ ತಪ್ಪುಗಳನ್ನು ಅರಿತು ಆಂತರ್ಯವನ್ನು ಶೋಧಿಸ ತೊಡಗಿದ. ಒಡನಾಡುವ ಮಿತ್ರರೊಂದಿಗೆ ತನ್ನ ಭಾವನೆಗಳನ್ನು ಹಂಚಿಕೊಳ್ಳಲಾರದೆ ಏಕಾಂತವನ್ನು ಬಯಸಿದ. ಕಾಡಿನ ಮೂಲೆಯಲ್ಲಿ ಗಿಡಮರಗಳ ಮಧ್ಯೆ ಏಕಾಂತದಲ್ಲಿರಲು ಇಚ್ಛಿಸಿದ. ಗುರುವಿನ ಮಾತುಗಳನ್ನು, ಉಪದೇಶವನ್ನು ಮನದಟ್ಟು ಮಾಡಿಕೊಳ್ಳುತ್ತಿದ್ದ. ಅಳಕನ್ನು ಹುಡುಕಿ ಮನವ ಗುಡಿಸುತ್ತಿದ್ದ, ಸಾರಿಸುತ್ತಿದ್ದ, ತಿಕ್ಕಿ ತೊಳೆದು, ಒರೆಸಿ, ಶುಭ್ರ ಮಾಡುತ್ತಿದ್ದ.


ಏಕಾಂತದಲ್ಲಿ ಕುಳಿತು ಅಂತರಂಗದ ಒಳಹೊಕ್ಕು ದೀಪ ಹಚ್ಚುತ್ತಿದ್ದ. ಬೆಳಕಿನಲ್ಲಿ ಆತ್ಮ ಸಂಶೋಧನೆ ಮಾಡುತ್ತಿದ್ದ. ಏಕಾಂತದಲ್ಲಿ ಕಣ್ಣೀರು ಸುರಿಸಿ ಮುತ್ತಾಗಿ ಬೆಳೆಸುತ್ತಿದ್ದ. ಹೃದಯ ಹೊಲವ ಉಳುತ್ತಿದ್ದ. ತನ್ನನ್ನು ತಾನೇ ತೋಡಿಕೊಂಡು ಬೀಜ ಮೊಳೆಯುವಂತೆ ಸಂಪನ್ನ ಗೊಳಿಸುತ್ತಿದ್ದ. ಏಕಾಂತದಲ್ಲಿ ದಿಗಂತದವರೆಗೂ ಸಾಗುತ್ತಿದ್ದ. ಮನವನ್ನು ಎತ್ತರಕ್ಕೆ ಬೆಳೆಸುತ್ತಿದ್ದ.

ಶಿಷ್ಯನು ಬಹಳಷ್ಟು ಹೊತ್ತು ಏಕಾಂತದಲ್ಲಿ ಕಳೆಯುವುದನ್ನು ಗಮನಿಸಿ ಶಿಷ್ಯನನ್ನು ಕರೆದು ''ನಿನ್ನ ಏಕಾಂತಕ್ಕೆ ಕಾರಣವೇನು?'' ಎಂದು ಕೇಳಿದರು.

''ಗುರುವೆ! ನಿಮ್ಮ ಸಾನಿಧ್ಯದಲ್ಲಿ ಕಲಿತದ್ದು ರಕ್ತಗತವಾಗಿರಿಸಲು ನಾ ಏಕಾಂತದಲ್ಲಿ ನನ್ನ ನಾನು ಹುಡುಕಿಕೊಂಡು ಹೊರಟಿರುವೆ'' ಎಂದ.

''ನಿನ್ನ ನೀನು ಹುಡುಕಲು ಎಲ್ಲಿಗೂ ಹೋಗಬೇಕಿಲ್ಲ. ಕಾಡು ವನದಲ್ಲಿ ನೀನು ಹುಡುಕಬೇಡ. ನೀನು ಇರುವುದು ನಿನ್ನ ಹೊರಗಲ್ಲ, ಒಳಗೆ, ನಿನ್ನ ದೃಷ್ಟಿ ಅಂತರ ಮುಖವಾಗಲಿ. ನಿನ್ನ ಭಾವ ಪರಿಪಕ್ವವಾಗಲಿ. ನಿನ್ನೊಳಗಣ ಹಾದಿ ಅನಂತವಾಗಲಿ. ಅದಕ್ಕೆ ಅನುವಾಗುವುದು ಏಕಾಂತ ಎಂದು ಅರಿತಿರುವೆಯಾ?'' ಎಂದರು ಗುರುಗಳು.

''ಏಕಾಂತದಿಂದ ಶ್ರೀಕಾಂತ ಸಾಕ್ಷಾತ್ಕಾರ. ಏಕಾಂತದ ಹಾದಿಯಲ್ಲಿ ಝುಣ್ ಹೆಜ್ಜೆ ಇಟ್ಟು ನಡೆ. ಸಾಗುವುದು. ಗುರಿ ಸೇರುವುದು'' ಎಂದಾಗ ಶಿಷ್ಯನ ಎದೆ ತುಂಬಿ ಬಂದಿತು.



# ಭಾರತಕ್ಕೆ ಕಾದಿದೆ ಭಾರಿ ಬಿಸಿಲಿನ ಶಾಕ್: ವಿಶ್ವಸಂಸ್ಥೆ ಮುನ್ಸೂಚನೆ..!

ವಾಷಿಂಗ್ಟನ್: ಮುಂದಿನ ಐದು ವರ್ಷಗಳಲ್ಲಿ, ಭೂಮಿಯು ಸುರಕ್ಷಿತವೆಂದು ನಿಗದಿಪಡಿಸಿದ ಅಂತರರಾಷ್ಟ್ರೀಯ ಹವಾಮಾನ ಮಿತಿಯನ್ನು ಮೀರಿ ಹೋಗುವ ಸಾಧ್ಯತೆಯಿದೆ ಮತ್ತು ಅತ್ಯಂತ ಬಿಸಿಯಾದ ವರ್ಷದ ದಾಖಲೆ ಮುಂದುವರೆಯುವ ಸಾಧ್ಯತೆಯಿದೆ ಎಂದು ವಿಶ್ವಸಂಸ್ಥೆಯ ಹೊಸ ಹವಾಮಾನ ಮುನ್ಸೂಚನೆಗಳು ತಿಳಿಸಿವೆ.

ವಿಶ್ವ ಹವಾಮಾನ ಸಂಸ್ಥೆಯು ಈಗ ಮತ್ತು 2030 ರ ನಡುವೆ ಸುಮಾರು 3 ಡಿಗ್ರಿ ಫ್ಯಾರನ್‌ಹೀಟ್ (1.66 ಡಿಗ್ರಿ ಸೆಲ್ಸಿಯಸ್) ಬೆಚ್ಚಗಾಗುವ ಆರ್ಕ್‌ಟಿಕ್‌ನ ಅಧಿಕ ಬಿಸಿಯಾಗುವಿಕೆ ಮತ್ತು ಮಾನವ-ಉಂಟುಮಾಡುವ ಹವಾಮಾನ ಬದಲಾವಣೆಯನ್ನು ಕಡಿಮೆ ಮಾಡಲು ಭೂಮಿಯ ನೈಸರ್ಗಿಕ ರಕ್ಷಣೆಯ ನಿರ್ಣಾಯಕ ಭಾಗವಾದ ಅಮೆಜಾನ್‌ಗೆ ಸಂಭಾವ್ಯ ಕಾಡ್ಗಿಚ್ಚುಗಳೊಂದಿಗೆ ಅಪಾಯಕಾರಿ ಬರಗಾಲವನ್ನು ಮುನ್ಸೂಚಿಸುತ್ತದೆ.

ಕಲ್ಲಿದ್ದಲು, ತೈಲ ಮತ್ತು ಅನಿಲದ ದಹನದಿಂದ ಗೋಳವು ಬಿಸಿಯಾಗುವುದು ಎಂದರೆ ಪ್ರವಾಹ, ಬರ ಮತ್ತು ಶಾಖ ಅಲೆಗಳು ಸೇರಿದಂತೆ ಹೆಚ್ಚು ತೀವ್ರ ಹವಾಮಾನ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ವಿಶ್ವಸಂಸ್ಥೆಯ ಹವಾಮಾನ ಸಂಸ್ಥೆ ಮತ್ತು ಯುನೈಟೆಡ್ ಕಿಂಗ್‌ಡಮ್‌ನ ಹವಾಮಾನ ಕಚೇರಿಯ ಮುನ್ಸೂಚನೆಗಳು ಕೈಗಾರಿಕಾ ಪೂರ್ವ ಕಾಲದಿಂದ 2026 ಮತ್ತು 2030 ರ ನಡುವಿನ ಸರಾಸರಿ ಜಾಗತಿಕ ತಾಪಮಾನವು 1.5 ಡಿಗ್ರಿ ಸೆಲ್ಸಿಯಸ್ (2.7 ಡಿಗ್ರಿ ಫ್ಯಾರನ್‌ಹೀಟ್) ಮೀರುವ ಸಾಧ್ಯತೆ ಶೇಕಡಾ 75 ರಷ್ಟು ಇದೆ ಎಂದು ಹೇಳಿದೆ.

ಆ ಮಿತಿಯು 2015 ರಲ್ಲಿ ಪ್ಯಾರಿಸ್ ಹವಾಮಾನ ಒಪ್ಪಂದದಿಂದ ನಿಗದಿಪಡಿಸಲಾದ ಸರಾಸರಿ 20 ವರ್ಷಗಳ ತಾಪಮಾನ ಏರಿಕೆಯ ಮಿತಿಯಾಗಿದೆ.ವಿಶ್ವಸಂಸ್ಥೆಯ ಸಾವು, ಅಪಾಯ ಮತ್ತು ಜಾತಿಗಳ ನಷ್ಟದ ಸಾಧ್ಯತೆ ಇದೆ. ಇದು ಕೇವಲ ಒಂದು ಡಿಗ್ರಿಯ ಹತ್ತನೇ ಒಂದು ಭಾಗದಷ್ಟಿದ್ದರೂ, ಹವಳ ಮತ್ತು ಹಿಮನದಿಗಳಂತಹ ಗ್ರಹದ ಕೆಲವು ಪರಿಸರ ವ್ಯವಸ್ಥೆಗಳು ಈ ಒತ್ತಡವನ್ನು ನಿಭಾಯಿಸಲು ಸಾಧ್ಯವಿಲ್ಲ.



ಮುಂದಿನ ಐದು ವರ್ಷಗಳಲ್ಲಿ ಕನಿಷ್ಠ ಒಂದು ವರ್ಷ 1.5 ಡಿಗ್ರಿ ಮಿತಿಯನ್ನು ಮೀರುವ ಸಾಧ್ಯತೆ ಶೇ. 91 ರಷ್ಟು ಮತ್ತು ಆ ವರ್ಷಗಳಲ್ಲಿ ಒಂದು ವರ್ಷ 2024 ರಲ್ಲಿ ಸ್ಥಾಪಿಸಲಾದ ಭೂಮಿಯ ಅತ್ಯಂತ ಬಿಸಿಯಾದ ವರ್ಷದ ದಾಖಲೆಯನ್ನು ಮುರಿಯುವ ಸಾಧ್ಯತೆ ಶೇ. 86 ರಷ್ಟು ಇದೆ ಎಂದು ವರದಿ ತಿಳಿಸಿದೆ.

1800 ರ ದಶಕದ ಅಂತ್ಯದಿಂದ ಪ್ರತಿ ವರ್ಷ 1.3 ಡಿಗ್ರಿ ಸೆಲ್ಸಿಯಸ್ (2.3 ಡಿಗ್ರಿ ಫ್ಯಾರನ್‌ಹೀಟ್) ಮತ್ತು 1.9 ಡಿಗ್ರಿ ಸೆಲ್ಸಿಯಸ್ (3.4 ಡಿಗ್ರಿ ಫ್ಯಾರನ್‌ಹೀಟ್) ನಡುವೆ ತಾಪಮಾನ ಇರುತ್ತದೆ ಎಂದು ಅಂದಾಜಿಸಿದೆ. (1.5) ನಾವು ಬೀಳಲಿರುವ ಬಂಡೆಯ ಅಂಚಿನಲ್ಲ ಎಂಬುದನ್ನು ಗಮನಿಸುವುದು ಮುಖ್ಯ ಎಂದು ಯುಕೆ ಹವಾಮಾನ ಕಚೇರಿಯ ಹವಾಮಾನ ವಿಜ್ಞಾನಿ, ವರದಿಯ ಸಹ-ಲೇಖಕಿ ಮೆಲಿಸ್ಸಾ ಸೀಬ್ರೂಕ್ ಹೇಳಿದರು.

ಪ್ರತಿಯೊಂದು ರೀತಿಯ 0.1 ಡಿಗ್ರಿ ಹೆಚ್ಚು ಹೆಚ್ಚು ತೀವ್ರ ಪರಿಣಾಮವನ್ನು ಬೀರುತ್ತದೆ.ಈ ವಾರ ಯುರೋಪಿನಲ್ಲಿ ಅಭೂತಪೂರ್ವ ಮೇ ತಿಂಗಳ ಶಾಖವನ್ನು ಅವರು ಸೂಚಿಸಿದರು.1.5 ಡಿಗ್ರಿ ಮಾರ್ಕ್‌ಗಿಂತ ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನದು ವಿವಿಧ ರೀತಿಯ ತೀವ್ರ ಹವಾಮಾನ ಘಟನೆಗಳು, ಬಹುಶಃ ಅನೇಕ ಬಿಸಿ/ಆರ್ದ್ರ/ಶುಷ್ಕ, ಅದು ನಾವು ಹಿಂದೆ ಅನುಭವಿಸಿದ ಯಾವುದನ್ನಾದರೂ ಮೀರಿಸುತ್ತದೆ ಮತ್ತು ಆದ್ದರಿಂದ ನಿರ್ಣಾಯಕವಾಗಿ, ನಮ್ಮ ನಗರ ಯೋಜನೆ, ಕೃಷಿ ಇತ್ಯಾದಿ ನಿರೀಕ್ಷಿಸಿದ ಯಾವುದನ್ನಾದರೂ ಮೀರಿಸುತ್ತದೆ ಎಂದು ವರದಿಯ ಭಾಗವಾಗಿರದ ಲಂಡನ್‌ನ ಇಂಪೀರಿಯಲ್ ಕಾಲೇಜ್ ಹವಾಮಾನ ವಿಜ್ಞಾನಿ ಫ್ರೆಡೆರಿಕ್ ಒಟ್ಟೊ ಇಮೇಲ್‌ನಲ್ಲಿ ತಿಳಿಸಿದ್ದಾರೆ.

ಇದರರ್ಥ ಅನೇಕ ಜನರು ತಮ್ಮ ಜೀವಗಳನ್ನು ಕಳೆದುಕೊಳ್ಳುತ್ತಾರೆ, ನಾವು ಆಹಾರ ಬೆಳೆಗಳ ಆಘಾತಗಳಿಗೆ ಮತ್ತು ಹೆಚ್ಚು ತೀವ್ರವಾದ ಕಾಡ್ಗಿಚ್ಚುಗಳಿಗೆ ಗುರಿಯಾಗಿದ್ದೇವೆ.ಬಹುತೇಕ ಎಲ್ಲಾ ಅಲ್ಪಾವಧಿಯ ಮುನ್ಸೂಚನೆಗಳು ಬಲವಾದ ಎಲ್ ನಿನೊಗೆ ಕರೆ ನೀಡುತ್ತವೆ ಇದು ಮಧ್ಯ ಪೆಸಿಫಿಕ್‌ನ ಕೆಲವು ಭಾಗಗಳಲ್ಲಿ ನೈಸರ್ಗಿಕ ತಾಪಮಾನ ಏರಿಕೆಯಾಗಿದ್ದು, ಇದು ವಿಶ್ವಾದ್ಯಂತ ಹವಾಮಾನವನ್ನು ಬದಲಾಯಿಸುತ್ತದೆ ಮತ್ತು ಜಾಗತಿಕ ತಾಪಮಾನವನ್ನು ಹೆಚ್ಚಿಸುತ್ತದೆ ಶೀಘ್ರದಲ್ಲೇ ರೂಪುಗೊಳ್ಳುತ್ತದೆ.

ವರದಿಯು ಇದು 2028 ರವರೆಗೆ ವಿಸ್ತರಿಸಬಹುದು ಎಂದು ಹೇಳಿದೆ. ಇದರಿಂದಾಗಿ, 2027 2024 ರ ಶಾಖದ ದಾಖಲೆಯನ್ನು ಮುರಿಯುವ ಸಾಧ್ಯತೆಯಿದೆ ಎಂದು ಸೀಬ್ರೂಕ್ ಹೇಳಿದರು.ಮತ್ತು ಮುಂದಿನ ಐದು ವರ್ಷಗಳು ಕೈಗಾರಿಕಾ ಪೂರ್ವ ಕಾಲದಿಂದ ಸರಾಸರಿ 1.5 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿದ್ದರೆ, ಭೂಮಿಯು ಒಂದು ದಶಕದಲ್ಲಿ ಕಾಲು ಡಿಗ್ರಿ ಸೆಲ್ಸಿಯಸ್ (0.45 ಡಿಗ್ರಿ ಫ್ಯಾರನ್‌ಹೀಟ್) ಬೆಚ್ಚಗಾಗುತ್ತದೆ ಎಂದರ್ಥ, ಇದು ಹಿಂದಿನ ಎಚ್ಚರಿಕೆ ದರಗಳಿಗಿಂತ ವೇಗವಾಗಿರುತ್ತದೆ.

ಅವು ಪ್ರತಿ ದಶಕಕ್ಕೆ ಹತ್ತನೇ ಎರಡು ಭಾಗದಷ್ಟು ಸೆಲ್ಸಿಯಸ್‌ಗೆ ಹತ್ತಿರದಲ್ಲಿದ್ದವು.ಜಾಗತಿಕ ತಾಪಮಾನ ಏರಿಕೆ ವೇಗವಾಗುತ್ತಿದೆಯೇ ಎಂದು ಹವಾಮಾನ ವಿಜ್ಞಾನಿಗಳು ಚರ್ಚಿಸುತ್ತಿದ್ದಾರೆ, ಇದು ಸ್ಪಷ್ಟವಾಗಿ ಭಯಾನಕವಾಗಿದೆ ಮತ್ತು ಈ ಪ್ರಕ್ಷೇಪಗಳು ನಿಜವಾದರೆ ಅದು ವೇಗವರ್ಧಿತ ಬದಲಾವಣೆಯ ದರವನ್ನು ನೋಡುವವರಿಗೆ ಹೆಚ್ಚುವರಿ ಪುರಾವೆಗಳನ್ನು ನೀಡುತ್ತದೆ ಎಂದು ಸೀಬ್ರೂಕ್ ಹೇಳಿದರು.

ಬೇಸಿಗೆಯಲ್ಲಿ ಆರ್ಕ್‌ಟಿಕ್ ಸಮುದ್ರದ ಮಂಜುಗಡ್ಡೆ ಕುಗ್ಗುತ್ತಲೇ ಇರುತ್ತದೆ ಎಂದು ವರದಿ ಮುನ್ಸೂಚನೆ ನೀಡಿದೆ.ಅಮೆಜಾನ್ ಒಣಗಬಹುದು, ಬೆಂಕಿಯ ಚಿಂತೆಗಳನ್ನು ಹುಟ್ಟುಹಾಕುತ್ತದೆ, ಅಮೆಜಾನ್ ಜಲಾನಯನ ಪ್ರದೇಶದಲ್ಲಿ ಇನ್ನೂ ಬೆಚ್ಚಗಿನ ಮತ್ತು ಅಸಾಮಾನ್ಯವಾಗಿ ಶುಷ್ಕ ಪರಿಸ್ಥಿತಿಗಳು ಇರಬೇಕೆಂದು ವರದಿ ಕರೆ ನೀಡುತ್ತದೆ ಮತ್ತು ಅದು ಸ್ಥಳೀಯ ನಿವಾಸಿಗಳು ಮತ್ತು ಒಟ್ಟಾರೆಯಾಗಿ ಗ್ರಹಕ್ಕೆ ವಿನಾಶಕಾರಿಯಾಗಬಹುದು ಎಂದು ಸೀಬ್ರೂಕ್ ಹೇಳಿದರು.

# ಚಂದ್ರನ ದಕ್ಷಿಣ ಧ್ರುವದಲ್ಲಿ ಮಂಜುಗಡ್ಡೆ ಪತ್ತೆ

## ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಿಂದ ಮಹತ್ವದ ಹೊಸ ವೈಜ್ಞಾನಿಕ ಪುರಾವೆ


• ಪ್ರಜೋದಯ ವರದಿ

**ನವದೆಹಲಿ:** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಚಂದ್ರಯಾನ-2 ಕಕ್ಷೆಗಾಮಿಯು ಚಂದ್ರನ ಮೇಲ್ಮೈ ಕೆಳಗೆ ಅದರ ದಕ್ಷಿಣ ಧ್ರುವ ಪ್ರದೇಶದಲ್ಲಿ ಮಂಜುಗಡ್ಡೆಯ ಸಂಭವನೀಯ ಉಪಸ್ಥಿತಿಯನ್ನು ಸೂಚಿಸುವ ಹೊಸ ವೈಜ್ಞಾನಿಕ ಪುರಾವೆಗಳನ್ನು ಒದಗಿಸಿದೆ.

ಚಂದ್ರಯಾನ-2 ರಲ್ಲಿರುವ ಡ್ಯುಯಲ್ ಫ್ರೀಕ್ವೆನ್ಸಿ ಸಿಂಥೆಟಿಕ್ ಅಪರ್ಚರ್ ರಾಡಾರ್ ನಿಂದ ಈ ಸಂಶೋಧನೆಗಳು ಬಂದಿವೆ, ಇದು ಎಲ್- ಮತ್ತು ಎಸ್ -ಬ್ಯಾಂಡ್ ಆವರ್ತನಗಳಲ್ಲಿ ಕಾರ್ಯ ನಿರ್ವಹಿಸುವ ಮೈಕ್ರೋವೇವ್ ಇಮೇಜಿಂಗ್ ಸಾಧನವಾಗಿದೆ. ಇದು ಚಂದ್ರನ ಮೇಲ್ಮೈಯನ್ನು ಅಧ್ಯಯನ ಮಾಡಲು ಬಳಸುವ ಮೊದಲ ಸಂಪೂರ್ಣ ಧ್ರುವೀಯತಾ ರಾಡಾರ್ ವ್ಯವಸ್ಥೆಯಾಗಿದೆ.

ಇಸ್ರೋದ ಪತ್ರಿಕಾ ಪ್ರಕಟಣೆಯ ಪ್ರಕಾರ, ಅಧ್ಯಯನವು ಚಂದ್ರನ ಧ್ರುವಗಳಲ್ಲಿ ಶಾಶ್ವತವಾಗಿ ನೆರಳಿನ ಪ್ರದೇಶಗಳಲ್ಲಿ ಇರುವ ಡಬಲ್ ನೆರಳು ಹೊಂದಿರುವ ಕುಳಿಗಳ ಮೇಲೆ ಕೇಂದ್ರೀಕರಿಸಿದೆ. ಈ ಪ್ರದೇಶಗಳು ಎಂದಿಗೂ ಸೂರ್ಯನ ಬೆಳಕನ್ನು ಪಡೆಯುವುದಿಲ್ಲ ಮತ್ತು ತಾಪಮಾನವು ಸುಮಾರು 25 ಕೆಲ್ವಿನ್ (ಸುಮಾರು -248) ಗೆ ಇಳಿಯುವುದರೊಂದಿಗೆ ಅತ್ಯಂತ ತಂಪಾಗಿರುತ್ತವೆ. ಇದು ಶತಕೋಟಿ ವರ್ಷಗಳ ಕಾಲ ನೀರಿನ ಮಂಜುಗಡ್ಡೆಯನ್ನು ಸಂರಕ್ಷಿಸಬಹುದಾದ ಸಂಭಾವ್ಯ ಬಲೆಗಳನ್ನಾಗಿ ಮಾಡುತ್ತದೆ.

ಕುಳಿಗಳನ್ನು ಅಧ್ಯಯನ ಮಾಡಲು ವಿಜ್ಞಾನಿಗಳು ಸುಧಾರಿತ ರಾಡಾರ್ ಧ್ರುವೀಯಮಾಪನ ವಿಧಾನಗಳನ್ನು ಬಳಸಿದರು ಮತ್ತು ಚಂದ್ರನ ದಕ್ಷಿಣ ಧ್ರುವ ಪ್ರದೇಶದಲ್ಲಿ ನಾಲ್ಕು ಡಬಲ್ ನೆರಳಿನ ಕುಳಿಗಳ ನೆಲದ ಕೆಳಗೆ ಭೂಗತ ಮಂಜುಗಡ್ಡೆಯ ಸಂಭವನೀಯ ಉಪಸ್ಥಿತಿಯನ್ನು ಕಂಡುಕೊಂಡರು. ಅವರು ರಾಡಾರ್ ಡೇಟಾವನ್ನು ಬಳಸಿಕೊಂಡು ಚಂದ್ರನ ಮೇಲೆ ಸಂಭವನೀಯ ಭೂಗತ ಮಂಜುಗಡ್ಡೆಯನ್ನು ಪತ್ತೆಹಚ್ಚುವ ವಿಧಾನವನ್ನು ಅಭಿವೃದ್ಧಿಪಡಿಸಿದರು.



ಈ ವಿಧಾನವು ವೃತ್ತಾಕಾರದ ಧ್ರುವೀಕರಣ ಅನುಪಾತ ಮತ್ತು ಧ್ರುವೀಕರಣದ ಪದವಿ ಮೌಲ್ಯಗಳನ್ನು ಬಳಸುತ್ತದೆ.ಚಂದ್ರನ ಮೇಲ್ಮೈ ಅಥವಾ ಭೂಗತ ವಸ್ತುಗಳೊಂದಿಗೆ ಸಂವಹನ ನಡೆಸಿದ ನಂತರ ಪ್ರತಿಫಲಿತ ರಾಡಾರ್ ಸಿಗ್ನಲ್‌ನ ಎಷ್ಟು ಭಾಗವು ಅದರ ಮೂಲ ಧ್ರುವೀಕರಣವನ್ನು ಉಳಿಸಿಕೊಳ್ಳುತ್ತದೆ ಎಂಬುದನ್ನು ಅಳೆಯುತ್ತದೆ. 0.13 ಕ್ಕಿಂತ ಕಡಿಮೆ ಮೌಲ್ಯಗಳೊಂದಿಗೆ 1 ಕ್ಕಿಂತ ಹೆಚ್ಚಿನ ಮೌಲ್ಯಗಳು ಚಂದ್ರನ ಮೇಲ್ಮೈ ಕೆಳಗೆ ಹೂತುಹೋಗಿರುವ ಮಂಜುಗಡ್ಡೆಯ ನಿಕ್ಷೇಪಗಳಿಗೆ ಸಂಬಂಧಿಸಿದ ಚದುರುವಿಕೆಯ ಮಾದರಿಗಳನ್ನು ಸೂಚಿಸಬಹುದು ಎಂದು ಕಂಡುಹಿಡಿದಿದೆ.

ಈ ವಿಧಾನವು ಮೇಲ್ಮೈ ಒರಟುತನದಿಂದ ಉತ್ಪತ್ತಿಯಾಗುವ ರಾಡಾರ್ ಪ್ರತಿಕ್ರಿಯೆಗಳಿಂದ ನಿಜವಾದ ಮಂಜುಗಡ್ಡೆಯ ಸಹಿಗಳನ್ನು ಪ್ರತ್ಯೇಕಿಸಲು ಸಹಾಯ ಮಾಡುತ್ತದೆ ಎಂದು ಸ್ಪೇಸಿ ಏಜೆನ್ಸಿ ಗಮನಿಸಿದೆ. ಅಧ್ಯಯನ ಮಾಡಿದ ಕುಳಿಗಳಲ್ಲಿ, ಫೌಸ್ಟಿನಿ ಕುಳಿಯೊಳಗಿನ 1.1 ಕಿಮೀ ಅಗಲದ ಒಂದು ಕುಳಿಯು ಭೂಗತ ಮಂಜುಗಡ್ಡೆಯ ಬಲವಾದ ಸೂಚನೆಗಳನ್ನು ತೋರಿಸಿದೆ.

ಪುರಾವೆಗಳು ರಾಡಾರ್ ಡೇಟಾದಿಂದ ಮಾತ್ರವಲ್ಲದೆ ಲೋಬೇಟ್ -ರಿಮ್ ರೂಪವಿಜ್ಞಾನವು ಮೇಲ್ಮೈ ಕೆಳಗೆ ಮಂಜುಗಡ್ಡೆಯಿಂದ ಸಮೃದ್ಧವಾಗಿರುವ ವಸ್ತುವನ್ನು ಅಪ್ಪಳಿಸಿದಾಗ ರೂಪುಗೊಳ್ಳುವ ಹರಿವಿನಂತಹ ಅಥವಾ ಹಾಲೆಗಳಿರುವ ನೋಟ ಸೂಚಿಸುತ್ತದೆ.

ಈ ಸಂಶೋಧನೆಗಳು ಚಂದ್ರನ ಧ್ರುವೀಯ ಚಂಚಲ ವಸ್ತುಗಳ ವಿತರಣೆಯ ಬಗ್ಗೆ ಪ್ರಮುಖ ಹೊಸ ಒಳನೋಟಗಳನ್ನು ಒದಗಿಸುತ್ತವೆ ಮತ್ತು ಭವಿಷ್ಯದ ಚಂದ್ರ ಪರಿಶೋಧನಾ ಕಾರ್ಯಾಚರಣೆಗಳಿಗೆ ಗಮನಾರ್ಹ ಪರಿಣಾಮಗಳನ್ನು ಬೀರುತ್ತವೆ, ಇದರಲ್ಲಿ ಭವಿಷ್ಯದ ಇಳಿಯುವಿಕೆ ಮತ್ತು ಸ್ಥಳದಲ್ಲೇ ಸಂಪನ್ಮೂಲ ಬಳಕೆ ಚಟುವಟಿಕೆಗಳಿಗೆ ಸಂಭಾವ್ಯ ಮಂಜುಗಡ್ಡೆ ಹೊಂದಿರುವ ಪ್ರದೇಶಗಳ ಗುರುತಿಸುವಿಕೆ ಸೇರಿವೆ ಎಂದು ಇಸ್ರೋ ಹೇಳಿದೆ.

## ಬಕ್ರೀದ್: ಮುಸ್ಲಿಮರ ಪ್ರಾರ್ಥನೆ



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಕೊಣನೂರು ಸಮೀಪದ ಕೆರೆಕೋಡಿಯ ಈದ್ಗಾ ಮೈದಾನದಲ್ಲಿ ಕೊಣನೂರಿನ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಬಕ್ರೀದ್ ಹಬ್ಬವನ್ನು ಸಡಗರ ಹಾಗೂ ಸಂಭ್ರಮದಿಂದ ಆಚರಿಸಿದರು.

ಹಬ್ಬದ ಅಂಗವಾಗಿ ಎಲ್ಲರೂ ಸಹ ಕೆರೆಕೋಡಿಯ ಈದ್ಗಾ ಮೈದಾನಕ್ಕೆ ತೆರಳಿ ಇಮಾಮರ ಹಿಂದೆ ಸಾಲಾಗಿ ನಿಂತು ಪ್ರಾರ್ಥನೆ ಸಲ್ಲಿಸಿ, ಜಗತ್ತಿಗೆ ಸುಖ, ಶಾಂತಿ ಹಾಗೂ ನೆಮ್ಮದಿ ದೊರೆಯಲಿ ಎಂದು ದೇವರಲ್ಲಿ ಮೊರೆಯಿಟ್ಟರು. ಬಳಿಕ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಸಡಗರದಿಂದ ಹಬ್ಬವನ್ನು ಆಚರಣೆ ಮಾಡಿದರು. ಪ್ರಾರ್ಥನೆಯ ನಂತರ ಖಬರಾಸ್ತಾನ್‌ಗೆ ತೆರಳಿ, ತಮ್ಮ ಪೂರ್ವಜರು ಹಾಗೂ ಮನೆಯಲ್ಲಿ ಮಡಿದವರ ಸಮಾಧಿಗೆ ಪೂಜೆ ಸಲ್ಲಿಸಿ ನಂತರ ಹಬ್ಬದ ವಿಶೇಷವಾಗಿ ತಂದೆ-ತಾಯಿ, ಅಕ್ಕ-ತಂಗಿ, ಅಣ್ಣ-ತಮ್ಮ, ಬಂಧು -ಬಾಂಧವರೆಲ್ಲರೂ ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ತಾಲ್ಲೂಕಿನ ಸಮಸ್ತ ಮುಸ್ಲಿಮರಿಗೆ ಶಾಸಕ ಎ.ಮಂಜು ಸೇರಿದಂತೆ ವಿವಿಧ ರಾಜಕೀಯ ಮುಖಂಡರುಗಳು ಶುಭಾಶಯ ಕೋರಿದರು.

# ಬಕ್ರೀದ್ ಹಬ್ಬ ತ್ಯಾಗ, ಸಹಾನುಭೂತಿಯ ಸಂಕೇತ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಗೆಂಡೇಹಳ್ಳಿ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಬಕ್ರೀದ್ ಹಬ್ಬದ ಅಂಗವಾಗಿ ಮುಸ್ಲಿಮರು ಭಕ್ತಿಭಾವದಿಂದ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.



ಪುರಸಭೆ ಅಧ್ಯಕ್ಷ ಅಕ್ರಂ ಷರೀಫ್ ಮಾತನಾಡಿ, ಬಕ್ರೀದ್ ಹಬ್ಬವು ತ್ಯಾಗ, ಸಹಾನುಭೂತಿ ಹಾಗು ಸಹೋದರತ್ವದ ಸಂದೇಶ ಸಾರುವ ಪವಿತ್ರ ಹಬ್ಬವಾಗಿದೆ. ಪ್ರವಾದಿ ಇಬ್ರಾಹಿಂ ಅವರ ತ್ಯಾಗದ ಸಂದೇಶವು ಪ್ರತಿಯೊಬ್ಬರ ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಲು ಪ್ರೇರಣೆಯಾಗಿದೆ. ಬಡವರು, ನಿರ್ಗತಿಕರು ಹಾಗೂ ಅಗತ್ಯವಿರುವವರಿಗೆ ಸಹಾಯ ಮಾಡುವ ಮನೋಭಾವ ಬೆಳೆಸುವುದು ಹಬ್ಬದ ಮುಖ್ಯ ಉದ್ದೇಶವಾಗಿದೆ ಎಂದರು.

ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಪರಸ್ಪರ ಪ್ರೀತಿ ವೃದ್ಧಿಯಾಗಬೇಕು. ಎಲ್ಲಾ ಧರ್ಮಗಳ ಜನರು ಸಹಬಾಳ್ವೆಯಿಂದ ಬದುಕಿದಾಗ ಮಾತ್ರ ಸಮಾಜ ಅಭಿವೃದ್ಧಿಯ ದಾರಿಗೆ ಸಾಗುತ್ತದೆ ಎಂದರು.

ಇದೇ ವೇಳೆ ಪಟ್ಟಣದ ಜನತೆ ಎಲ್ಲರೂ ಹಬ್ಬವನ್ನು ಸಡಗರ, ಸಂಭ್ರಮ ಹಾಗೂ ಸಹೋದರ ಭಾವದಿಂದ ಆಚರಿಸಬೇಕು ಎಂದು ಕರೆ ನೀಡಿ ಬಕ್ರೀದ್ ಹಬ್ಬದ ಶುಭಾಶಯಗಳನ್ನು ತಿಳಿಸಿದರು.

ಮುಖಂಡ ಜಾಕೀರ್ ಪಾಷ ಮಾತನಾಡಿ, ಬಕ್ರೀದ್ ಹಬ್ಬವು ತ್ಯಾಗ, ನಂಬಿಕೆ ಮತ್ತು ಮಾನವೀಯತೆಯ ಸಂಕೇತವಾಗಿದೆ. ಎಲ್ಲಾ ಜಾತಿ-ಧರ್ಮದ ಜನರು ಒಂದಾಗಿ ಸಹಬಾಳ್ವೆಯಿಂದ ಬದುಕಬೇಕು. ಆಗ ಮಾತ್ರ ದೇವರು ಒಳ್ಳೆಯದು ಮಾಡುತ್ತಾನೆ ಎಂದು ಕರೆ ನೀಡಿದರು.

# ಶೀಘ್ರವೇ ಅಡುಗೆ ಅನಿಲ ಸಮಸ್ಯೆ ಬಗೆಹರಿಸುವಂತೆ ಒತ್ತಾಯ

## ಕರ್ನಾಟಕ ರಕ್ಷಣಾ ವೇದಿಕೆಯಿಂದ ಉಗ್ರ ಹೋರಾಟದ ಎಚ್ಚರಿಕೆ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನಲ್ಲಿ ಅಡುಗೆ ಅನಿಲ ಸಮಸ್ಯೆ ಬಗೆಹರಿಸಬೇಕು ಎಂದು ತಾಲ್ಲೂಕು ಕರವೇ ಗೌರವಾಧ್ಯಕ್ಷ ಎನ್.ರವಿಕುಮಾರ್ ಅವರು ಒತ್ತಾಯಿಸಿದರು.

ಪಟ್ಟಣದ ಭರತ್ ಗ್ಯಾಸ್ ಮುಂಭಾಗ ಅಡುಗೆ ಅನಿಲ ಸಿಲಿಂಡರ್ ಪಡೆಯಲು ಮಹಿಳೆಯರು, ವೃದ್ಧರು ಎನ್ನದೆ ದಿನವಿಡೀ ಗಂಟೆಗಟ್ಟಲೆ ಮೈಲುದ್ದದ ಸರದಿ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ಯಾಸ್ ವಿತರಣೆ ಸಮಸ್ಯೆ ಬ್ಗಿಡಾಯಿಸಿದ್ದರೂ ತಾಲೂಕು ಆಡಳಿತ ಸಮಸ್ಯೆ ಬಗೆಹರಿಸಲು ಕಿಂಚಿತ್ತೂ ತಲೆಕೆಡಿಸಿಕೊಂಡಿಲ್ಲ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

ಭರತ್ ಗ್ಯಾಸ್ ಏಜೆನ್ಸಿ ಮಾಲೀಕನನ್ನು ಪ್ರಶ್ನಿಸಿದರೆ ನಮ್ಮಲ್ಲಿ 20 ಸಾವಿರ ಗ್ರಾಹಕರಿದ್ದು ದಿನಕ್ಕೆ 6 ಸಾವಿರ ಅಡುಗೆ ಅನಿಲ ಗ್ಯಾಸ್ ಪೂರೈಕೆಯಾಗುತ್ತಿವೆ ಎನ್ನುವ ಉತ್ತರ ನೀಡುತ್ತಾನೆ. ಆದರೆ ಇನ್ನುಳಿದ ಗ್ರಾಹಕರಿಗೆ ಅಡುಗೆ ಅನಿಲ ನೀಡುವವರು ಯಾರು ಎನ್ನುವ ಪ್ರಶ್ನೆ ಉದ್ಭವಿಸಿದೆ. ಆಟೋಗಳಿಗೆ ಗ್ಯಾಸ್ ಬಳಸುತ್ತಿದ್ದು ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ. ಅಡುಗೆ ಅನಿಲ ಗ್ರಾಹಕರ ಮನೆ ಬಾಗಿಲಿಗೆ ವಿತರಣೆ ಮಾಡಬೇಕೆನ್ನುವ ನಿಯಮವಿದೆ. ಆದರೆ ಏಜೆನ್ಸಿ ಬಳಿ ಬಂದರೂ ಬುಕ್ ಮಾಡಿನ್ದಿದ ಸಮಯ ಕಳೆದು ಹತ್ತು ದಿನಗಳಾದರೂ ವಿತರಣೆ ಮಾಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಖಾಲಿ ಗ್ಯಾಸ್ ತಲೆಮೇಲೆ ಹೊತ್ತು ಬರುವ ವಯಸ್ಸಾದ ವೃದ್ಧರನ್ನು ವಿನಾಕಾರಣ ಅಲೆದಾಡಿಸಲಾಗುತ್ತಿದೆ. ತಾಲೂಕಿನಲ್ಲಿ ಎಷ್ಟು ಗ್ಯಾಸ್ ಏಜೆನ್ಸಿ ಗಳಿವೆ ವಿತರಣೆ ಮಾನದಂಡ ಏನು, ಎಷ್ಟು ಗ್ರಾಹಕರಿಗೆ ಓಟಿಪಿ ಬರುತ್ತದೆ ಎಷ್ಟು ಜನ ಬುಕ್ ಮಾಡಿದರೆ ಕೊರತೆ ಎಷ್ಟಿದೆ ಎನ್ನುವ ಮಾಹಿತಿ ಕೂಡ ಇಲ್ಲ. ಆಹಾರ ಇಲಾಖೆ ಗ್ಯಾಸ್ ಏಜೆನ್ಸಿಗಳ ಮಾಲೀಕರ ಸಭೆ ಕೂಡ ನಡೆಸಿಲ್ಲ. ಈ ಕುರಿತು ನಾಮಫಲಕ ಕೂಡ ಅಳವಡಿಸದೆ ನಿರ್ಲಕ್ಷ್ಯ ವಹಿಸಿದೆ ಎಂದು ಆಪಾದಿಸಿದರು.

ವಾಣಿಜ್ಯ ಬಳಕೆ ಗ್ಯಾಸ್ ಸಿಗದೆ ಹೋಟೆಲ್‌ಗಳಲ್ಲಿ ಊಟ, ತಿಂಡಿ ದರ ಹೆಚ್ಚಾಗಿದೆ. ವಾಣಿಜ್ಯ ಬಳಕೆ ಗ್ಯಾಸ್ ವಿತರಿಸಬೇಕು. ಮನೆ ಬಳಕೆ ಅಡುಗೆ ಅನಿಲ ಸಿಲಿಂಡರ್ ಸಮಸ್ಯೆಯನ್ನು ಇನ್ನೊಂದು ವಾರದಲ್ಲಿ ವಿತರಿಸಬೇಕು. ಇಲ್ಲವಾದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.

ಕರವೇ ಸಾಮಾಜಿಕ ಜಾಲ ತಾಣ ತಾಲೂಕು ಘಟಕದ ಅಧ್ಯಕ್ಷ ಅಕ್ಮಲ್ ಪಾಷಾ ಮಾತನಾಡಿ, ಅರಕಲಗೂಡು ತಾಲೂಕಿನ ಹಲವಾರು ಮಂದಿ ಅಕ್ಕಪಕ್ಕದ ತಾಲೂಕುಗಳ ಗ್ಯಾಸ್ ಏಜೆನ್ಸಿಗಳಲ್ಲಿ ಗ್ರಾಹಕರಾಗಿದ್ದಾರೆ. ಅಡುಗೆ ಗ್ಯಾಸ್ ಸ್ಥಿದೆ ಇವರ ಪಾಡಂತೂ ಹೇಳತೀರದಾಗಿದೆ. ಗಾಡಿ ಬರುವ ಎರಡು ಮೂರು ಕಿಮೀ ದೂರದಲ್ಲೇ ಕೆಲವರಿಗೆ ವಿತರಿಸಲಾಗುತ್ತಿದೆ. ಹಳ್ಳಿಗಳಲ್ಲಿ ಕೃಷಿ ಕೆಲಸ ಬಿಟ್ಟು ಗ್ಯಾಸ್‌ಗಾಗಿ ಪರದಾಡುವಂತಾಗಿದೆ. ಈ ಅವ್ಯವಸ್ಥೆಯನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕು ಕರವೇ ಘಟಕದ ಅಧ್ಯಕ್ಷ ಜಿಮ್ ಸೋಮು, ಆಟೋ ಚಾಲಕರ ಘಟಕದ ಅಧ್ಯಕ್ಷ ಎ.ವಿ. ಧರ್ಮ, ಉಪಾಧ್ಯಕ್ಷ ವಿಜಯಕುಮಾರ್ ಗೋಷ್ಠಿಯಲ್ಲಿದ್ದರು.

# ವಿವಾದಾತ್ಮಕ ಜಾಗದ ಸಮಸ್ಯೆ ಬಗೆಹರಿಸಲು ಸೂಚನೆ

• ಪ್ರಜೋದಯ ವರದಿ

**ಸಕಲೇಶಪುರ:** ಅಗ್ರಹಾರ ಬಡಾವಣೆಯಲ್ಲಿ ಉಂಟಾಗಿರುವ ವಿವಾದತ್ಮಾಕ ಜಾಗದ ಕುರಿತ ಸಮಸ್ಯೆಯನ್ನು ಕಾನೂನು ವ್ಯಾಪ್ತಿಯಲ್ಲಿ ಬಗೆಹರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ವಾರ್ಡ್ ನಂ 4 ಬಸವನಹಳ್ಳಿ ಹಾಗೂ ಅಗ್ರಹಾರ ವ್ಯಾಪ್ತಿಯ ಜಾಗವೊಂದರ ಮಾಲೀಕತ್ವದ ಕುರಿತು ವಿವಾದವಾಗಿರುವ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಸಾರ್ವಜನಿಕರೊಡನೆ ಮಾತನಾಡಿದ ಅವರು, ಬಸವನಹಳ್ಳಿ ಸಮೀಪ ಇರುವ ಖಾಲಿ ಜಾಗವೊಂದರಲ್ಲಿ ನಮಗೆ ಸೇರುತ್ತದೆಯೆಂದು ಕೆಲವರು ಶೆಡ್ ಹಾಕಿದ್ದು ಆದರೆ ಇದನ್ನು ಕೆಲವರು ವಿರೋಧಿಸಿದ್ದಾರೆ. ಈ ನಿಟ್ಟಿನಲ್ಲಿ ನಾನು ಸ್ಥಳಕ್ಕೆ ಭೇಟಿ ನೀಡಿದ್ದೇನೆ. ತಾಲೂಕು ಆಡಳಿತ ಸರ್ವೆ ಮಾಡಿ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಆದೇಶಿಸಿದ್ದೇನೆ. ಅಧಿಕಾರಿಗಳು ಕಾನೂನಾತ್ಮಕವಾಗಿ ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ ಎಂದರು.



ಬಸವನಹಳ್ಳಿ ನಿವಾಸಿ ಮಧು ಕುಮಾರ್ ಮಾತನಾಡಿ, ತಲೆತಲಾಂತರಗಳಿಂದ ನಾವು ಈ ಜಾಗದ ಮಾಲೀಕತ್ವವನ್ನು ಹೊಂದಿದ್ದೇವೆ. ಆದರೆ ಕೆಲವರು ಇಲ್ಲ ಸಲ್ಲದ ದಾಖಲಾತಿಗಳನ್ನು ತಂದು ಈ ಜಾಗ ಹರಿಜನ ಕೇರಿಗೆ ಸೇರುತ್ತದೆ ಎಂದು ಅಕ್ರಮವಾಗಿ ಶೆಡ್ ಗಳನ್ನು ನಿರ್ಮಾಣ ಮಾಡಿದ್ದಾರೆ. ನಮ್ಮ ಜಾಗದ ಎಲ್ಲಾ ದಾಖಲಾತಿಗಳು ನಮ್ಮ ಬಳಿ ಇದೆ, ಗ್ರಾಮಠಾಣೆ ಜಾಗವಿದ್ದಲ್ಲಿ ನಮ್ಮೂರಿನ ಅಭಿವೃದ್ದಿಗೆ ಜಾಗವನ್ನು ನೀಡಬೇಕು. ನಿವೇಶನ ನೀಡುವುದಾದರೆ ಸಕಲೇಶಪುರದಲ್ಲಿರುವ ಎಲ್ಲಾ ಸರ್ಕಾರಿ ಜಾಗವನ್ನು ನಿವೇಶನಕ್ಕೆ ನೀಡಬೇಕು ಎಂದರು.

ಬಿ.ಎಸ್.ಪಿ ಮುಖಂಡ ಹರೀಶ್ ಅತ್ನಿ ಮಾತನಾಡಿ, ಬಸವನಹಳ್ಳಿಯಲ್ಲಿ ದಲಿತರಿಗಾಗಿ 20 ಗುಂಟೆ ಜಾಗ ಮೀಸಲಿಡಲಾಗಿದ್ದು ಆದರೆ ಇದನ್ನು ಪ್ರಭಾವಿಗಳು ನಕಲಿ ಹಕ್ಕು ಪತ್ರ ಸೃಷ್ಟಿಸಿ ಬೇರೆಯವರಿಗೆ ಮಾರಾಟ ಮಾಡಿದ್ದಾರೆ. ದಲಿತರು ಇಲ್ಲಿ ಶೆಡ್ ಹಾಕಿಕೊಂಡಿದಕ್ಕೆ ಕೆಲವು ರೌಡಿಗಳು ಬಂದು ಮಾರಕಾಸ್ತ್ರಗಳಿಂದ ಬೆದರಿಕೆ ಹಾಕಿದ್ದಾರೆ. ದಲಿತರ ಜಾಗವನ್ನು ದಲಿತರಿಗೆ ಕೊಡಬೇಕು ಹಾಗೂ ಗ್ರಾಮ ಠಾಣಾ ಜಾಗವನ್ನು ಸಹ ನಿವೇಶನರಹಿತರಿಗೆ ಕೊಡಬೇಕು. ಈ ನಿಟ್ಟಿನಲ್ಲಿ ಶಾಸಕರು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ವಕೀಲ ಸುಧೀಶ್, ಬಸವನಹಳ್ಳಿ ಧರ್ಮೇಶ್, ಬಿಎಸ್‌ಪಿ ತಾಲೂಕು ಅಧ್ಯಕ್ಷ ವಿರೇಶ್, ಮುಖಂಡ ಶಾಂತು ಅಗ್ರಹಾರ ಹಾಗೂ ಬಸನನಹಳ್ಳಿ ಬಡಾವಣೆಯ ನಾಗರಿಕರು ಹಾಜರಿದ್ದರು.

# ಇಂದಿನಿಂದ ಅರಸೀಕೆರೆ ಚಾಂಪಿಯನ್ಸ್‌ಕಪ್ ಪಂದ್ಯಾವಳಿ

## ಮೊದಲ ಬಹುಮಾನ 1 ಲಕ್ಷ ರೂ., ಟ್ರೋಫಿ

• ಪ್ರಜೋದಯ ವರದಿ

**ಅರಸೀಕೆರೆ:** ಪಟ್ಟಣದ ಜೆಕೆ ಪ್ರೆಸೆಂಟ್ ವತಿಯಿಂದ ಮೇ 29 ರಿಂದ 31ರ ವರೆಗೆ ನಡೆಯುತ್ತಿರುವ ಅರಸೀಕೆರೆ ಚಾಂಪಿಯನ್ಸ್ ಕಪ್ ಪಂದ್ಯಾವಳಿಯನ್ನು ವ್ಯವಸ್ಥಿತವಾಗಿ ನಡೆಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜೆಕೆ ಕ್ರಿಕೆಟರ್ಸ್‌ನ ಶಿವು ಮತ್ತು ಚೇತನ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಂಟು ಫ್ರಾಂಚೈಸಿ ತಂಡಗಳು ಹಾಗೂ ಎಂಟು ಅಫೀಷಿಯಲ್ ತಂಡಗಳು ಒಟ್ಟು 16 ತಂಡಗಳು ಚಾಂಪಿಯನ್ ಕಪ್‌ಗಾಗಿ ಹೋರಾಟ ನಡೆಸಲಿವೆ. ತಾಲ್ಲೂಕಿನ ಒಬ್ಬ ಐಕಾನ್ ಆಟಗಾರ ಸೇರಿದಂತೆ ಜಿಲ್ಲೆಯ ಇಬ್ಬರು ಮತ್ತು ನೆರೆಯ ತಾಲ್ಲೂಕು ತಿಪಟೂರಿನಿಂದ ಒಬ್ಬರು ಹೀಗೆ ಒಂದು ತಂಡಕ್ಕೆ ನಾಲ್ಕು ಐಕಾನ್ ಆಟಗಾರರನ್ನು ಹಂಚಿಕೆ ಮಾಡಲಾಗಿದ್ದು ಉಳಿದ ಆಟಗಾರರನ್ನು ಆಯಾ ತಂಡದ ಪ್ರಾಚೈಸಿಗಳು ಪಾಯಿಂಟ್ ಬಿಡ್ ಮೂಲಕ ಆಯ್ಕೆ ಮಾಡಿಕೊಂಡಿದ್ದಾರೆ ಅದೇ ರೀತಿ ಪೊಲೀಸ್ ಇಲಾಖೆ ಸೇರಿದಂತೆ ನಾನಾ ಇಲಾಖೆಯ ಅಧಿಕಾರಿಗಳ ತಂಡ ಟ್ರೋಫಿಗಾಗಿ ತೀವ್ರ ಪೈಪೋಟಿ ನಡೆಸಲಿವೆ ಎಂದು ಹೇಳದರು.



ಕ್ರೀಡಾಕೂಟದ ಚಾಂಪಿಯನ್ಸ್ ಆಗಿ ಹೊರಹೊಮ್ಮುವ ತಂಡ ಆಕರ್ಷಕ ಟ್ರೋಪಿಯೊಂದಿಗೆ ಒಂದು ಲಕ್ಷ ರೂ. ನಗದು ಬಹುಮಾನ ಪಡೆದರೆ ರನ್ನರ್ಸ್ ತಂಡ ಟ್ರೋಫಿಯೊಂದಿಗೆ 50, ಸಾವಿರ ಬಹುಮಾನ ಇದೇ ರೀತಿ ಮೂರು ಮತ್ತು ನಾಲ್ಕನೇ ಸ್ಥಾನಕ್ಕೆ ಬಾಜನವಾಗುವ ತಂಡಗಳು ಟ್ರೋಫಿಯೊಂದಿಗೆ ಸಮಾಧಾನಕರ ಬಹುಮಾನ ಪಡೆಯಲಿವೆ ಎಂದು ಮಾಹಿತಿ ನೀಡಿದರು.

ನಗರದ ರೈಲ್ವೆ ಮೈದಾನದಲ್ಲಿ ನಡೆಯುವ ಈ ಕ್ರಿಕೆಟ್ ಹಬ್ಬವು ಸಾಮಾಜಿಕ ಜಾಲತಾಣಗಳಲ್ಲಿ ಲೈವ್ ನೋಡಬಹುದಾಗಿದೆ ಎಂದ ಅವರು ತಾಲೂಕಿನ ಹಿರಿಯ ಕ್ರಿಕೆಟ್ ಆಟಗಾರರು ಅಭಿಮಾನಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಅರಸೀಕೆರೆ ಚಾಂಪಿಯನ್ ಕಪ್ ಟೂರ್ನಮೆಂಟ್ ಅನ್ನು ಯಶಸ್ವಿಗೊಳಿಸಿಕೊಡುವಂತೆ ಅವರು ಮನವಿ ಮಾಡಿದರು.


# ಗೋವಿಗೆ 'ರಾಷ್ಟ್ರೀಯ ಪ್ರಾಣಿ' ಸ್ಥಾನಮಾನ ನೀಡಿ

• ಪ್ರಜೋದಯ ವರದಿ

**ನವದೆಹಲಿ:** ಮುಸ್ಲಿಮರ ಪವಿತ್ರ ಬಕ್ರೀದ್ ಹಬ್ಬದ ದಿನವೇ ಮುಸ್ಲಿಂ ಸಂಘಟನೆಗಳು ಹಸುವಿಗೆ ರಾಷ್ಟ್ರೀಯ ಪ್ರಾಣಿಯ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿವೆ.

ಹಿಂದೂ ಮತ್ತು ಮುಸ್ಲಿಮರ ನಡುವೆ ಸಾಮುದಾಯಿಕ ಸೌಹಾರ್ದತೆ ಮತ್ತು ಪರಸ್ಪರ ಗೌರವಕ್ಕೆ ಕರೆ ನೀಡುತ್ತಾ, ಮುಸ್ಲಿಂ ಸಂಘಟನೆಗಳು ಗುರುವಾರ ಹಸುವಿಗೆ ರಾಷ್ಟ್ರೀಯ ಪ್ರಾಣಿಯ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿವೆ.

ಬಕ್ರೀದ್ (ಈದ್-ಉಲ್-ಅಜ್ಞಾ) ಪ್ರಾರ್ಥನೆಗಳ ನಂತರ ದೆಹಲಿಯ ಸೀಲಂಪುರ ಪ್ರದೇಶದಲ್ಲಿ ಮುಸ್ಲಿಂ ಸಂಘಟನೆಗಳು ಪ್ರತಿಭಟನೆ ನಡೆಸಿ, ಹಸುವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸುವಂತೆ ಆಗ್ರಹಿಸಿವೆ.




''ಹಸುವನ್ನು ರಾಷ್ಟ್ರೀಯ ಪ್ರಾಣಿಯಾಗಿ ಘೋಷಿಸಿ'' ಎಂದು ಬರೆದ ಫಲಕಗಳು ಮತ್ತು ಪೋಸ್ಟರ್‌ಗಳನ್ನು ಹಿಡಿದ ಮುಸ್ಲಿಂ ಸಮುದಾಯದ ಸದಸ್ಯರು ನ್ಯೂ ಸೀಲಂಪುರದ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

**ಬೇಡಿಕೆ ಮೊದಲೇನಲ್ಲ**

ಈ ಹಿಂದೆ ಉತ್ತರ ಪ್ರದೇಶ ಮತ್ತು ರಾಜಸ್ಥಾನ ಸೇರಿದಂತೆ ಹಲವು ರಾಜ್ಯಗಳ ಕೆಲವು ಮುಸ್ಲಿಂ ಸಂಘಟನೆಗಳು ಇದೇ ಬೇಡಿಕೆ ಮುಂದಿರಿಸಿ ಪ್ರತಿಭಟನೆ ನಡೆಸಿದ್ದವು.

ಈದ್-ಉಲ್-ಅಜ್ಞಾ ಮೊದಲು ಜಮಿಯತ್ ಉಲಮಾ-ಎ-ಹಿಂದ್ (ಅರ್ಷದ್ ಮದನಿ ಬಣ) ಅಧ್ಯಕ್ಷ ಮೌಲಾನಾ ಅರ್ಷದ್ ಮದನಿ ಇದೇ ರೀತಿಯ ಬೇಡಿಕೆಯನ್ನು ಮುಂದಿಟ್ಟಿದ್ದರು. ಆ ಪ್ರತಿಭಟನೆಗಳಿಗೆ ಬೆಂಬಲ ಸೂಚಿಸಿ ಗುರುವಾರ ದೆಹಲಿಯಲ್ಲಿ ಮುಸ್ಲಿಂ ಸಂಘಟನೆಗಳು ಈ ಪ್ರತಿಭಟನೆ ನಡೆಸಿವೆ.

ಇದರಿಂದಾಗಿ ದೇಶದಲ್ಲಿ ಸಹೋದರತ್ವವನ್ನು ಬಲಪಡಿಸುವುದಕ್ಕೂ, ಶಾಂತಿ ಮತ್ತು ಸೌಹಾರ್ದತೆಯ ಸಂದೇಶವನ್ನು ಸಾರುವುದಕ್ಕೂ ಉದ್ದೇಶಿತವಾಗಿದೆ ಎಂದು ಪ್ರತಿಭಟನೆ ಯಲ್ಲಿ ಭಾಗ ವಹಿಸಿದ್ದ ಪ್ರತಿಭಟನಾಕಾರರೊಬ್ಬರು ತಿಳಿಸಿದ್ದಾರೆ.

# ಬೇಲೂರಿನಲ್ಲಿ ಬಕ್ರೀದ್ ಆಚರಣೆ: ಸಾಮೂಹಿಕ ವಿಶೇಷ ಪ್ರಾರ್ಥನೆ


## ತ್ಯಾಗ, ಬಲಿದಾನ ಹಾಗೂ ದಾನದ ಸಂಕೇತ: ರಿಜ್ವಾನ್ ರಸವಿ

• ಪ್ರಜೋದಯ ವರದಿ

**ಬೇಲೂರು:** ವಿಶ್ವ ವಿಖ್ಯಾತ ಪ್ರವಾಸಿ ತಾಣವಾದ ಬೇಲೂರಿನಲ್ಲಿ ಮುಸ್ಲಿಂ ಬಾಂಧವರು ಬಕ್ರೀದ್ (ಈದ್ -ಉಲ್-ಅಝ್ಹಾ) ಹಬ್ಬವನ್ನು ಶ್ರದ್ಧಾಭಕ್ತಿ ಹಾಗೂ ಅರ್ಥಪೂರ್ಣವಾಗಿ ಆಚರಿಸಿದರು.

ಪಟ್ಟಣದ ಐತಿಹಾಸಿಕ ಕೋಟೆ ಜಾಮಿಯಾ ಮಸೀದಿಯ ನೇತೃತ್ವದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ನೂರಾರು ಮುಸ್ಲಿಂ ಬಾಂಧವರು ಪಾಲ್ಗೊಂಡು, ಲೋಕ ಕಲ್ಯಾಣ ಹಾಗೂ ದೇಶದ ಶಾಂತಿ-ಸೌಹಾರ್ದತೆಗಾಗಿ ವಿಶೇಷ ದುವಾ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೋಟೆ ಜಾಮಿಯಾ ಮಸೀದಿಯ ಧರ್ಮಗುರುಗಳಾದ ಮೌಲಾನಾ ರಿಜ್ವಾನ್ ರಸವಿ, ಬಕ್ರೀದ್ ಕೇವಲ ಹಬ್ಬವಲ್ಲ ಇದು ತ್ಯಾಗ, ಬಲಿದಾನ ಹಾಗೂ ದಾನದ ಸಂಕೇತವಾಗಿದೆ. ಆರ್ಥಿಕವಾಗಿ ಹಿಂದುಳಿದವರಿಗೆ, ನಿರ್ಗತಿಕರಿಗೆ ಮತ್ತು ಬಡವರಿಗೆ ನೆರವಾಗುವುದೇ ಈ ಹಬ್ಬದ ಮುಖ್ಯ ಉದ್ದೇಶ. ನಾವು ಮಾತ್ರ ಬಿರಿಯಾನಿ ಉಂಡು, ನಮ್ಮ ಅಕ್ಕಪಕ್ಕದ ಮನೆಯವರು ಹಸಿವಿನಿಂದ ಮಲಗಿದ್ದರೆ, ಅಂಥವರು ನೈಜ ಮುಸ್ಲಿಮರಾಗಲು ಸಾಧ್ಯವೇ ಇಲ್ಲ. ಸಮಾಜದಲ್ಲಿ ಯಾರೂ ಹಸಿವಿನಿಂದ ಇರದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ. ಪ್ರವಾದಿ ಇಬ್ರಾಹಿಂ ಮತ್ತು ಅವರ ಪುತ್ರ ಪ್ರವಾದಿ ಇಸ್ಮಾಯಿಲ್ ಅವರ ಶ್ರೇಷ್ಠ ತ್ಯಾಗ ಹಾಗೂ ಬಲಿದಾನದ ಸ್ಮರಣಾರ್ಥ ಈ ಹಬ್ಬವನ್ನು ಆಚರಿಸಲಾಗುತ್ತದೆ ಎಂದು ಹೇಳಿದರು.



ಈ ಸಂದರ್ಭದಲ್ಲಿ ಬೇಲೂರು ಪುರಸಭೆ ಅಧ್ಯಕ್ಷ ಅಕ್ರಮ್ ಶರೀಫ್, ಅಸಂಘಟಿತ ಕಾರ್ಮಿಕರ ಸಂಘಟನೆಯ ಜಿಲ್ಲಾಧ್ಯಕ್ಷ ಜಾಕೀರ್ ಪಾಷಾ, ಮುಸ್ಲಿಂ ಒಕ್ಕೂಟದ ಅಧ್ಯಕ್ಷ ನಹೀಮ್ ಪಾಷಾ, ಯುವ ಕಾಂಗ್ರೆಸ್ ಮುಖಂಡ ತನ್ನು, ಉದ್ಯಮಿ ಅಕ್ರಮ್, ಪತ್ರಕರ್ತ ನೂರ್ ಅಹಮದ್ ಹಾಗೂ ಪುಟ್ಟ ಮಕ್ಕಳು ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

ಯಾವುದೇ ಅಹಿತಕರ ಘಟನೆ ನಡೆದಂತೆ ಪೊಲೀಸ್ ಇಲಾಖೆಯ ಸರ್ಕಲ್ ಇನ್‌ಸ್ಪೆಕ್ಟರ್ ರೇವಣ್ಣ, ಸಬ್ ಇನ್‌ಸ್ಪೆಕ್ಟರ್ ಶಿವನಗೌಡ ಪಾಟೀಲ್, ಮುಖ್ಯ ಪೇದೆ ದೇವರಾಜ್, ಸಿಬ್ಬಂದಿಗಳಾದ ಪ್ರದೀಪ್, ಉಮೇಶ್, ಚೇತನ್, ಬಾಲು ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿತ್ತು

## ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೂಚನೆ

# ತಾಲ್ಲೂಕು ಮಟ್ಟದಲ್ಲಿ ಕೌಶಲ್ಯ ಸಮಿತಿ ಸಭೆ ನಡೆಸಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಎಲ್ಲಾ ತಾಲ್ಲೂಕು ಮಟ್ಟದಲ್ಲಿ ಕೌಶಲ್ಯ ಸಮಿತಿ ಸಭೆಯನ್ನು ಮುಂದಿನ ಜುಲೈ 27 ರೊಳಗೆ ತಾಲ್ಲೂಕುಗಳಲ್ಲಿ ನಡೆಸುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಕೌಶಲ್ಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಸಮಿತಿಯ ಉದ್ದೇಶ ಮತ್ತು ಕಾರ್ಯಗಳ ಬಗ್ಗೆ ತಿಳುವಳಿಕೆ ನೀಡಬೇಕು. ಜಿಲ್ಲಾ ಮಟ್ಟದಲ್ಲಿ ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕು ಇದುವರೆಗೆ ಒಂದು ಸಭೆ ಮಾಡಿಲ್ಲ ಏಕೆ ಎಂದು ಪ್ರಶ್ನಿಸಿದರು.

ಏನೇನು ಕಾರ್ಯಕ್ರಮ ನಿರೂಪಿಸಿದ್ದೀರಿ. ಯಾವ ಯಾವ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ ಎಂಬುವುದರ ಬಗ್ಗೆ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.



ಸರ್ಕಾರದ ಮತ್ತು ಖಾಸಗಿ ತರಬೇತಿ ಕೇಂದ್ರಗಳ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿದರಲ್ಲದೆ, ಸರ್ಕಾರದ ಯೋಜನೆಗಳ ಮಾಹಿತಿ ಕೂಡ ಸಂಕಲ್ಪ ಯೋಜನೆಯಡಿ ವೃತ್ತಿ ತರಬೇತಿಯಲ್ಲಿ ಪ್ರಮಾಣೀಕೃತ ಅರ್ಹ ಫಲಾನುಭವಿಗಳಿಗೆ ಟೂಲ್ ಕಿಟ್ ವಿತರಣೆಗೆ ಕ್ರಮ ವಹಿಸಲು ಸೂಚನೆ ನೀಡಿದರು.

ಜಿಲ್ಲೆಯಲ್ಲಿ ತಾಲ್ಲೂಕುವಾರು ಎಷ್ಟು ಪದವಿ ಕಾಲೇಜುಗಳಿವೆ ಪ್ರತಿ ವರ್ಷ ಪದವಿ ಮುಗಿಸಿ ಎಷ್ಟು ವಿದ್ಯಾರ್ಥಿಗಳು ಹೊರ ಬರುತ್ತಿದ್ದಾರೆ ಎಂಬ ಮಾಹಿತಿ ಹಾಗೂ ಜಿಲ್ಲೆಯಲ್ಲಿ ಎಷ್ಟು ಫಲಾನುಭವಿಗಳು ಯುವನಿಧಿ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ ಎಂಬ ಮಾಹಿತಿ ಒದಗಿಸುವಂತೆ ಸೂಚನೆ ನೀಡಿದರು. ತರಬೇತಿ ಸಂಸ್ಥೆಗಳನ್ನು ಬಳಸಿಕೊಂಡು ಯುವ ಜನತೆಗೆ ಪರಿಣಾಮಕಾರಿಯಾಗಿ ತರಬೇತಿ ನೀಡುವ ಮೂಲಕ ಕೌಶಲ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು. ಯುವನಿಧಿ ಯೋಜನೆಯಡಿ ನೋಂದಣಿ ಮಾಡಿಕೊಂಡಿರುವ ಫಲಾನುಭವಿಗಳು ಕೌಶಲ್ಯ ತರಬೇತಿ ಪಡೆಯಲು ಅರಿವು ಮೂಡಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲ್ವೆ ಪ್ರಾಜೆಕ್ಟ್ ಅಡಿಯಲ್ಲಿ ನಡೆಯುತ್ತಿರುವ 66 ಕೆ.ವಿ.ವಿದ್ಯುತ್ ಮಾರ್ಗದಡಿಯಲ್ಲಿ ಬರುವ ಟವರ್, ಕಾರಿಡಾರ್ ಕಾಮಗಾರಿಯು ಕಂದಲಿಯ ಯಗಚಿ ವಿದ್ಯಾಪೀಠದ ಮೂಲಕ ಹಾದು ಹೋಗಿದ್ದು, ಕೌಶಲ್ಯಾಭಿವೃದ್ಧಿ ಇಲಾಖೆಗೆ ಸೇರಿದೆ ಭೂ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಕಾರಾಗೃಹದಲ್ಲಿ ದಾಖಲಿರುವ ಬಂದಿಗಳಿಗೆ ಆನ್‌ಲೈನ್ ಮೂಲಕ ಪಶು ಸಂಗೋಪನೆ, ಕುರಿ ಕೋಳಿ ಸಾಕಾಣಿಕೆ,ಅಣಬೆ ಬೇಸಾಯ ಕುರಿತು ತರಬೇತಿ ನೀಡಲು ಕ್ರಮ ವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಜಿಲ್ಲೆಯ ಪ್ರೌಢ ಶಾಲೆ ಮತ್ತು ಪಿ.ಯು.ಸಿ. ವಿದ್ಯಾರ್ಥಿ ಗಳಿಗೆ ನನ್ನ ವೃತ್ತಿ ನನ್ನ ಆಯ್ಕೆ ಯೋಜನೆಯಡಿ ಶಾಲೆಗಳಲ್ಲಿ ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಬಾಬು, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ವಿಜಯಲಕ್ಷ್ಮಿ ಹಾಗು ವಿವಿಧ ಇಲಾಖೆಗಳ ಅಧಿಕಾರಿಗಳು ಇನ್ನಿತರರು ಸಭೆಯಲ್ಲಿ ಹಾಜರಿದ್ದರು.

# ಟಿ 20 ಭಾರತ ತಂಡ ಪ್ರಕಟ; ಹರ್ಮನ್‌ಪ್ರೀತ್ ಕೌರ್ ನಾಯಕಿ

• ಪ್ರಜೋದಯ ವರದಿ

**ನವದೆಹಲಿ:** 2026ರ ಮಹಿಳಾ ಟಿ 20 ವಿಶ್ವಕಪ್‌ಗಾಗಿ 15 ಸದಸ್ಯರ ಭಾರತ ತಂಡವನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಪ್ರಕಟಿಸಿದೆ. ನಿರೀಕ್ಷೆಯಂತೆ, ಹರ್ಮನ್ ಪ್ರೀತ್ ಕೌರ್ ತಂಡದ ನಾಯಕಿಯಾಗಿದ್ದು, ಸ್ಮೃತಿ ಮಂಧಾನಾ ಉಪ ನಾಯಕಿಯಾಗಿದ್ದಾರೆ. ಜೆಮಿಮಾ ರೊಡ್ರಿಗಸ್, ಶಫಾಲಿ ವರ್ಮಾ ಮತ್ತು ರಿಚಾ ಘೋಷ್ ಸೇರಿದಂತೆ ಹಲವಾರು ತಾರೆಯರು ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಗಾಯದಿಂದಾಗಿ ಅಮನ್ಜೋತ್ ಕೌರ್ ತಂಡದಿಂದ ಹೊರಗುಳಿದಿದ್ದಾರೆ. ಬ್ಯಾಟ್ಸ್‌ಮನ್‌ಗಳಾದ ಪ್ರತೀಕಾ ರಾವಲ್ ಮತ್ತು ಹರ್ಲೀನ್ ಡಿಯೋಲ್ ಮತ್ತು ಸ್ಪಿನ್ ಬೌಲಿಂಗ್ ಆಲ್‌ರೌಂಡರ್ ಸ್ನೇಹಾ ರಾಣಾ ಕೂಡ ತಂಡದ ಭಾಗವಾಗಿಲ್ಲ.

**ಭಾರತದ ಮಹಿಳಾ 20 ವಿಶ್ವಕಪ್ 2026 ತಂಡ**

ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪ ನಾಯಕಿ), ಶಫಾಲಿ ವರ್ಮಾ, ಜೆಮಿಮಾ ರೊಡ್ರಿಗಸ್, ಭಾರತಿ ಫುಲ್ಮಾಲಿ, ದೀಪ್ತಿ ಶರ್ಮಾ, ರಿಚಾ ಘೋಷ್ (ವಿಕೆಟ್ ಕೀಪರ್), ಶ್ರೀ ಚರಣಿ, ಯಾಸ್ತಿಕಾ ಭಾಟಿಯಾ (ವಿಕೆಟ್ ಕೀಪರ್), ನಂದನಿ ಶರ್ಮಾ, ಅರುಂಧತಿ ರೆಡ್ಡಿ, ರೇಣುಕಾ ಸಿಂಗ್ ಠಾಕೂರ್, ಕ್ರಾಂತಿ ಗೌಡ, ಶ್ರೇಯಾಂಕಾ ಪಾಟೀಲ್, ರಾಧಾ ಯಾದವ್.




ತಂಡದ ಘೋಷಣೆಯ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಗಾಯಗೊಂಡಿರುವ ಅಮನ್ಜೋತ್ ಕೌರ್ ಬದಲಿಗೆ ಮಧ್ಯಮ ಕ್ರಮಾಂಕದ ಆಟಗಾರ್ತಿಯಾಗಿ ಭಾರತಿ ಫುಲ್ಮಾಲಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ದೃಢಪಡಿಸಿದರು. ಫುಲ್ಮಾಲಿ 2026ರ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ತಮ್ಮ ಆಕ್ರಮಣಕಾರಿ ಬ್ಯಾಟಿಂಗ್ ಮೂಲಕ ಪ್ರಭಾವ ಬೀರಿದರು.

**ಸಂಪೂರ್ಣ ವೇಳಾಪಟ್ಟಿ ಬಿಡುಗಡೆ; ಜೂನ್ 14ರಂದು ಭಾರತ-ಪಾಕಿಸ್ತಾನ ಮುಖಾಮುಖಿ!**

10 ಪಂದ್ಯಗಳಿಂದ 17 ವಿಕೆಟ್‌ಗಳೊಂದಿಗೆ 2026ರ ಜಂಟಿ ಅತ್ಯಧಿಕ ವಿಕೆಟ್ ಪಡೆದ ಬೌಲರ್ ಆಗಿದ್ದ ನಂದನಿ ಶರ್ಮಾ ಅವರಿಗೆ ತಂಡದಲ್ಲಿ ಸ್ಥಾನ ನೀಡಲಾಗಿದೆ.

ಶ್ರೀ ಚರಣಿ, ಶ್ರೇಯಾಂಕಾ ಪಾಟೀಲ್ ಮತ್ತು ರಾಧಾ ಯಾದವ್ ಅವರು ಇಂಗ್ಲೆಂಡ್ ಮತ್ತು ವೇಲ್ಸ್ ಪ್ರವಾಸದಲ್ಲಿ ಭಾರತದ ಸ್ಪಿನ್ ಬೌಲಿಂಗ್ ದಾಳಿಯನ್ನು ಮುನ್ನಡೆಸಲಿದ್ದಾರೆ. ಸ್ನೇಹಾ ರಾಣಾ ಮತ್ತು ವೈಷ್ಣವಿ ಶರ್ಮಾ ಅವರಂತಹ ಆಟಗಾರ್ತಿಯರು ಹೊರಗುಳಿದಿದ್ದಾರೆ. ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು, ರಾಧಾ ಯಾದವ್ ಅವರ ಆಲ್ ರೌಂಡ್ ಸಾಮರ್ಥ್ಯಕ್ಕಾಗಿ ಶ್ಲಾಘಿಸಿದರು. ವಿಶೇಷವಾಗಿ ಡಬ್ಲ್ಯುಪಿಎಲ್ 2026ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಅವರ ಸುಧಾರಿತ ಬ್ಯಾಟಿಂಗ್ ಪ್ರದರ್ಶನಕ್ಕಾಗಿ ಆಯ್ಕೆಯಾಗಿದ್ದಾರೆ ಎಂದರು.

ಅನುಭವಿ ರೇಣುಕಾ ಸಿಂಗ್ ಠಾಕೂರ್, ಅರುಂಧತಿ ರೆಡ್ಡಿ, ಕ್ರಾಂತಿ ಗೌಡ್ ಮತ್ತು ನಂದನಿ ವೇಗದ ದಾಳಿಯನ್ನು ರೂಪಿಸುತ್ತಾರೆ. ಯಸ್ತಿಕಾ ಭಾಟಿಯಾ ಅವರನ್ನು ಬ್ಯಾಕಪ್ ವಿಕೆಟ್ ಕೀಪರ್ ಆಗಿ ಆಯ್ಕೆ ಮಾಡಲಾಗಿದೆ.

2026ರ ಮಹಿಳಾ ಟಿ20 ವಿಶ್ವಕಪ್ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ನಡೆಯಲಿದ್ದು, ಜೂನ್ 14 ರಂದು ಪ್ರಾರಂಭವಾಗಲಿದೆ.

CMYK CMYK CMYK CMYK

## ಮಹಿಳಾ-ಮಕ್ಕಳ ಆಸ್ಪತ್ರೆಗೆ ಸಿಇಓ ದಿಢೀರ್ ಭೇಟಿ

» ಮೊದಲನೇ ಪುಟದಿಂದ

ದೊರೆಯುತ್ತಿರುವ ಸೇವೆ ಮತ್ತು ಸೌಲಭ್ಯ ನೋಡಿದಾಗ ಕೆಲವೊಂದು ವಿಷಯಗಳಲ್ಲಿ ಖಾಸಗಿ ಆಸ್ಪತ್ರೆಗಳಿಗಿಂತ ಉತ್ತಮ ಸೌಲಭ್ಯ, ವ್ಯವಸ್ಥೆ ಇಲ್ಲಿವೆ ಎಂದರು.

ಶಿಶು ಮರಣ ಪ್ರಮಾಣ ಕಡಿಮೆ ಮಾಡುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳು, ತಾಯಂದಿರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ವ್ಯವಸ್ಥೆ, ನವಜಾತ ಶಿಶುಗಳ ಆರೈಕೆ ಹಾಗೂ ಪೌಷ್ಠಿಕತೆ ಸಂಬಂಧಿತ ವಿಚಾರಗಳ ಕುರಿತು ವೈದ್ಯರೊಂದಿಗೆ ಚರ್ಚೆ ನಡೆಸಲಾಗಿದೆ. ಕೆಲವು ವಿಭಾಗಗಳಲ್ಲಿ ಇನ್ನೂ ಅಭಿವೃದ್ಧಿ ಅಗತ್ಯ ವಿದೆ. ಅವುಗಳನ್ನು ಹಂತ ಹಂತವಾಗಿ ಸುಧಾರಿಸುವ ಕಾರ್ಯ ನಡೆಯಲಿದೆ. ಮುಂದಿನ ದಿನಗಳಲ್ಲಿ ಮತ್ತೊಮ್ಮೆ ಆಸ್ಪತ್ರೆಗೆ ಭೇಟಿ ನೀಡುವುದಾಗಿ ತಿಳಿಸಿದ ಅವರು, ಮುಂದಿನ ಬಾರಿ ಪೂರ್ವ ಸೂಚನೆ ಇಲ್ಲದೆ ಅನಿರೀಕ್ಷಿತ ಭೇಟಿ ನೀಡುತ್ತೇನೆ. ಆ ವೇಳೆ ಸೇವೆಗಳ ಸ್ಥಿತಿಗತಿ ಹೇಗಿದೆ ಎಂಬುದನ್ನು ಮತ್ತೆ ಪರಿಶೀಲಿಸುವುದಾಗಿ ತಿಳಿಸಿದರು.

ಸರ್ಕಾರಿ ಆಸ್ಪತ್ರೆಯ ಕಾರ್ಯವೈಖರಿ ನಮಗೆ ತೃಪ್ತಿ ತಂದಿದೆ. ದೊಡ್ಡ ಮಟ್ಟದ ಸಮಸ್ಯೆ ಇಲ್ಲ. ಕೆಲವು ಸಣ್ಣಪುಟ್ಟ ಅಡಚಣೆ ಸರಿ ಪಡಿಸಿಕೊಳ್ಳಬೇಕಾಗಿದೆ. ಆಸ್ಪತ್ರೆಗೆ ಬಂದ ತಾಯಂದಿರ ಜೊತೆಗೂ ಮಾತನಾಡಿದ್ದೇವೆ. ಅವರು ಕೂಡ ಇಲ್ಲಿನ ಸೇವೆ ಮತ್ತು ಸೌಲಭ್ಯ ಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿದ್ದಾರೆ. ಹಲವರು ಖಾಸಗಿ ಆಸ್ಪತ್ರೆ ಗಿಂತ ಇಲ್ಲಿನ ಸೇವೆ ಉತ್ತಮವಾಗಿದೆ ಎಂದರು.


**ಸೂಪರ್ ಸ್ಪಷಾಲಿಟಿ ಆಸ್ಪತ್ರೆ ಕಾಮಗಾರಿಗೆ ವೇಗ**

ನಗರದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಸರ್ಕಾರಿ ಸೂಪರ್ ಸ್ಪಷಾಲಿಟಿ ಆಸ್ಪತ್ರೆ ಶೀಘ್ರದಲ್ಲೇ ಆಸ್ಪತ್ರೆ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ. ನಾವೂ ಸಹ ಬೇಗ ಆರಂಭಿಸಬೇಕೆಂಬ ಉದ್ದೇಶ ಹೊಂದಿದ್ದೇವೆ. ಅನಾವಶ್ಯಕ ವಿಳಂಬದಿಂದ ಸಾರ್ವಜನಿ ಕರಿಗೆ ತೊಂದರೆ ಉಂಟಾಗುತ್ತದೆ. ಕಾಮಗಾರಿ ಪ್ರಕ್ರಿಯೆಗಳನ್ನು ವೇಗಗೊಳಿಸಲಾಗುತ್ತಿದೆ ಎಂದು ಸಿಇಓ ತಿಳಿಸಿದರು.

ಈ ವೇಳೆ ಡಿಹೆಚ್ಓ ಡಾ||ಅನಿಲ್ ಕುಮಾರ್, ಹಿಮ್ಸ್ ನಿರ್ದೇಶಕ ಡಾ||ರಾಜಣ್ಣ, ಶಸ್ತ್ರ ಚಿಕಿತ್ಸಕ ಡಾ||ರಾಘವೇಂದ್ರ ಪ್ರಸಾದ್ ಮೊದಲಾದವರಿದ್ದರು.

# ವಿನೇಶ್‌ಗೆ ಟ್ರಯಲ್ಸ್‌ನಲ್ಲಿ ಅವಕಾಶ

## ಹೈಕೋರ್ಟ್ ಆದೇಶ ಪ್ರಶ್ನಿಸಿ ಎಸ್‌ಸಿಗೆ ಅರ್ಜಿ



• ಪ್ರಜೋದಯ ವರದಿ

**ನವದೆಹಲಿ:** ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಒಲಿಂಪಿಯನ್ ವಿನೇಶ್ ಫೋಗಟ್ ಅವರಿಗೆ ಅವಕಾಶ ನೀಡಿರುವುದನ್ನು ಪ್ರಶ್ನಿಸಿ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್ ಇದೇ ಶನಿವಾರ ಮತ್ತು ಭಾನುವಾರ ನಡೆಯಲಿದೆ.

ದೆಹಲಿ ಹೈಕೋರ್ಟ್‌ನ ವಿಭಾಗೀಯ ಪೀಠವು ಮೇ 22ರಂದು ನೀಡಿರುವ ಆದೇಶವು ಮೇಲ್ನೋಟಕ್ಕೆ ಅಕ್ರಮವಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ರಜಾ ಕಾಲದ ಅರ್ಜಿಯಲ್ಲಿ ತಿಳಿಸಿರುವ ಫೆಡರೇಷನ್, ವಿನೇಶ್ ಪರವಾಗಿ ನಿರ್ದೇಶನಗಳನ್ನು ನೀಡುವ ಮೊದಲು ಪೀಠವು ತನಗೆ ವಿವರವಾದ ಉತ್ತರ ನೀಡಲು ಸಾಕಷ್ಟು ಕಾಲಾವಕಾಶವನ್ನೂ ನೀಡಲಿಲ್ಲ ಎಂದು ವಾದಿಸಿದೆ.

ಪ್ರಕಟವಾಗಿರುವ ಆಯ್ಕೆ ಮಾನದಂಡಗಳ ಪ್ರಕಾರ ವಿನೇಶ್ ಅವರು ಟ್ರಯಲ್ಸ್‌ನಲ್ಲಿ ಭಾಗವಹಿಸಲು ಅನರ್ಹರೆನಿಸಿಕೊಂಡಿದ್ದಾರೆ. ಆದರೂ ಅವರ ಸೇರ್ಪಡೆಗೆ ಹೈಕೋರ್ಟ್ ನಿರ್ದೇಶನ ನೀಡಿದೆ ಎಂದು ಫೆಡರೇಷನ್ ಹೇಳಿದೆ. ಅಂತರರಾಷ್ಟ್ರೀಯ ಬಹು ಕ್ರೀಡೆಗಳ ಕೂಟಗಳಿಗೆ ಅಥ್ಲೀಟುಗಳ ಆಯ್ಕೆಯು ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ ಅಧಿಕಾರ ವಾಗಿದೆ ಎಂದೂ ವಾದಿಸಿದೆ.

ನಿವೃತ್ತಿ ತ್ಯಜಿಸಿ ಸಕ್ರಿಯ ಕ್ರೀಡೆಗೆ ಮರಳುವ ಕ್ರೀಡಾಪಟು, ವಾಡಾ ಮತ್ತು ವಿಶ್ವ ಕುಸ್ತಿ ಸಂಸ್ಥೆಯ (ಯುಡಬ್ಲ್ಯುಡಬ್ಲ್ಯು) ಉದ್ದೀಪನ ಮದ್ದುಸೇವನೆ ನಿಗ್ರಹ ನಿಯಮಗಳ ಪ್ರಕಾರ ಆರು ತಿಂಗಳು ಕಡ್ಡಾಯ ಅವಧಿಯಲ್ಲಿ ವೇರಬೌಟ್ಸ್ (ತಮ್ಮ ವಾಸ್ತವ್ಯ ಸ್ಥಳ) ಮತ್ತು ಡೋಪಿಂಗ್ ಪರೀಕ್ಷೆಗೆ ಒಳಗಾಗಬೇಕಾಗುತ್ತದೆಂದು ಹೇಳಿದೆ.

ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಶಿಪ್, ಸೀನಿಯರ್ ಫೆಡರೇಷನ್ ಕಪ್ ಮತ್ತು 20 ವರ್ಷ ದೊಳಗಿವರ ರಾಷ್ಟ್ರೀಯ ಚಾಂಪಿಯನ್ ಷಿಪ್‌ಗಳಲ್ಲಿ ಗೆದ್ದಿರುವ ಪದಕಗಳ ಆಧಾರದಲ್ಲಿ ಪ್ರತಿಯೊಂದು ವಿಭಾಗದಲ್ಲಿ ಈಗಾಗಲೇ 12 ಕುಸ್ತಿಪಟುಗಳು ಅರ್ಹತೆ ಪಡೆದಿದ್ದಾರೆ. ಹೈಕೋರ್ಟ್ ಆದೇಶ ನೀಡುವ ಮೊದಲು ಅಭಿಪ್ರಾಯ ಆಲಿಸುವ ಗೋಜಿಗೆ ಹೋಗಿಲ್ಲ ಎಂದು ಫೆಡರೇಷನ್ ಅರ್ಜಿಯಲ್ಲಿ ತಿಳಿಸಿದೆ.

ಆಯ್ಕೆ ಟ್ರಯಲ್ಸ್‌ಗೆ ತಮ್ಮನ್ನು ಅನರ್ಹಗೊಳಿಸಿದ್ದನ್ನು ಪ್ರಶ್ನಿಸಿ ವಿನೇಶ್ ಈ ಮೊದಲು ದೆಹಲಿ ಹೈಕೋರ್ಟ್ ಮೊರೆಹೋಗಿದ್ದರು. ಅವರಿಗೆ ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿದ ಹೈಕೋರ್ಟ್ ಪೀಠವು ಸೆಣಸಾಟಗಳ ವಿಡಿಯೋ ಚಿತ್ರೀಕರಣ, ಸ್ವತಂತ್ರ ವೀಕ್ಷಕರ ನೇಮಕ ಸೇರಿ ಕೆಲವು ಷರತ್ತುಗಳನ್ನು ಪಾಲಿಸುವಂತೆ ಆದೇಶದಲ್ಲಿ ತಿಳಿಸಿತ್ತು.

## ಜಿಲ್ಲೆಯಲ್ಲಿ ಮುಂದುವರೆದ ಮಳೆ: ರೈತರಿಗೆ ಅನುಕೂಲ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆಯ ವಿವಿಧೆಡೆ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಮಳೆ ಗುರುವಾರವೂ ಮುಂದುವ ರೆದಿದೆ. ಸಂಜೆ ವೇಳೆ ಸುರಿದ ಮಳೆ ಯಿಂದ ಜನಜೀವನ ಅಸ್ತವ್ಯಸ್ತ ಗೊಂಡಿದೆ. ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ ಸೇರಿ ಹಲವು ತಾಲ್ಲೂಕುಗಳಲ್ಲಿ ಗುಡುಗು, ಸಿಡಿಲು ಸಹಿತ ವರುಣನ ಅಬ್ಬರ ಮುಂದುವರಿದಿದೆ.

ಧಾರಾಕಾರ ಮಳೆಯಿಂದ ವಾಹನ ಸವಾರರು, ಬೀದಿಬದಿ ವ್ಯಾಪಾರಿಗಳು ಪರದಾಡು ವಂತಾಯಿತು. ಕೆಲವೆಡೆ ರಸ್ತೆಗಳ ಮೇಲೆ ನೀರು ನಿಂತ ಪರಿಣಾಮ ವಾಹನ ಸಂಚಾರಕ್ಕೂ ಅಡಚಣೆ ಉಂಟಾಯಿತು. ನಗರ ಪ್ರದೇಶಗಳಲ್ಲಿ ಜನರು ಮಳೆಯಿಂದ ತಪ್ಪಿಸಿಕೊಳ್ಳಲು ಅಂಗಡಿ ಮುಂಗಟ್ಟು ಗಳ ಆಶ್ರಯ ಪಡೆಯುವ ದೃಶ್ಯ ಕಂಡುಬಂತು.

ಕಳೆದ ಎರಡು ದಿನಗಳಿಂದ ಜಿಲ್ಲೆ ಯಾದ್ಯಂತ ನಿರಂತರವಾಗಿ ಮಳೆಯಾ ಗುತ್ತಿದ್ದು, ಉತ್ತಮ ಮಳೆಯಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ಮಳೆ ಕೊರತೆಯಿಂದ ಕೆರೆ-ಕಟ್ಟೆಗಳು ಬರಿದಾಗಿದ್ದವು. ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದಲ್ಲದೇ, ಹಸಿರು ಮೇವು ಇಲ್ಲದೆ ರೈತರು ಸಂಕಷ್ಟ ಅನುಭವಿಸುತ್ತಿದ್ದರು. ಈಗ ಸುರಿಯುತ್ತಿರುವ ಮಳೆಯಿಂದ ಕೆರೆ-ಕಟ್ಟೆಗಳಲ್ಲಿ ನೀರು ಹರಿದುಬರುತ್ತಿದ್ದು, ಹೊಲಗದ್ದೆಗಳಲ್ಲಿ ಹಸಿರು ಮೇವು ಚಿಗುರ ತೊಡಗಿದೆ. ನಿರಂತರ ಮಳೆಯಿಂದ ಕೃಷಿ ಚಟುವಟಿಕೆಗಳಿಗೆ ತಾತ್ಕಾಲಿಕ ಅಡಚಣೆ ಉಂಟಾಗಿದೆ.

ಈಗಾಗಲೇ ಜೋಳ, ಆಲೂಗಡ್ಡೆ ಬಿತ್ತನೆ ಕಾರ್ಯ ಆರಂಭಗೊಂಡಿರುವು ದರಿಂದ ಕೃಷಿಗೆ ಸಾಕಷ್ಟು ಅನುಕೂಲ ವಾಗಿದೆ. ಈ ಬಾರಿ ಪೂರ್ವ ಮುಂಗಾರು ಕೈಗೊಡ್ಡಿದ್ದರಿಂದ ರೈತರು ಕಂಗಾ ಲಾಗಿದ್ದರು. ಈ ನಡುವೆ ಆಗಾಗ್ಗೆ ಸುರಿಯುತ್ತಿರುವ ಮಳೆ ರೈತರಲ್ಲಿ ಕೊಂಚ ನಿರಾಳ ತರಿಸಿದೆ.

ಭಾರತೀಯ ಹವಾಮಾನ ಇಲಾಖೆ ನೀಡಿರುವ ಮುನ್ಸೂಚನೆಯ ಪ್ರಕಾರ, ರಾಜ್ಯದಾದ್ಯಂತ ಮೇ 31ರ ವರೆಗೆ ಗುಡುಗು, ಸಿಡಿಲು ಹಾಗೂ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ. ಗುಡುಗು, ಮಿಂಚು ಹಾಗೂ ಚಂಡ ಮಾರುತ ಮಾದರಿಯ ತೀವ್ರ ಗಾಳಿ ಬೀಸುವ ಸಾಧ್ಯತೆ ಇರುವುದಾಗಿ ಇಲಾಖೆ ಎಚ್ಚರಿಕೆ ನೀಡಿದೆ.

ಮೇ 29ರಿಂದ ಮೇ 31ರವರೆಗೆ 'ಯೆಲ್ಲೋ ಅಲರ್ಟ್' ಘೋಷಿಸಲಾ ಗಿದ್ದು, ಅಲ್ಲಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

# ಸಂಭ್ರಮದ ಬಕ್ರೀದ್ ಆಚರಣೆ

• ಪ್ರಜೋದಯ ವರದಿ





**ಸಕಲೇಶಪುರ:** ತ್ಯಾಗ, ಭಕ್ತಿ, ಮಾನವೀಯತೆ ಹಾಗೂ ಸಹೋದರತ್ವದ ಸಂದೇಶ ಸಾರುವ ಪವಿತ್ರ ಬಕ್ರೀದ್ ಹಬ್ಬವನ್ನು ತಾಲ್ಲೂಕಿನಾದ್ಯಂತ ಮುಸ್ಲಿಂ ಬಾಂಧವರು ಭಕ್ತಿ, ಶ್ರದ್ಧೆ ಹಾಗೂ ಸಂಭ್ರಮದಿಂದ ಆಚರಿಸಿದರು.

ಪಟ್ಟಣದ ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಂ ಸಹೋದರರು ಒಂದಾಗಿ ಸೇರಿ ಬಕ್ರೀದ್ ಹಬ್ಬದ ವಿಶೇಷ ಸಾಮೂಹಿಕ ನಮಾಜ್ ಸಲ್ಲಿಸಿದರು. ತಾಲ್ಲೂಕಿನ ಕಾಡುಮನೆ, ಹಾನುಬಾಳು, ದೇಖ್ಲಾ, ಆನೆ ಮಹಲ್, ಮಾರನಹಳ್ಳಿ, ಕೊಲ್ಲಹಳ್ಳಿ, ಬಾಳುಪೇಟೆ,ಗುಲಗಳಲೆ, ಹೊಸೂರು ಸೇರಿ ವಿವಿಧ ಗ್ರಾಮಗಳ ಜಾಮಿಯಾ ಮಸೀದಿಗಳಲ್ಲಿಯೂ ವಿಶೇಷ ಪ್ರಾರ್ಥನೆಗಳು ನೆರವೇರಿಸಲ್ಪಟ್ಟವು.

ಲಬಾಬಿನ್ ಮಸೀದಿಯ ಇಮಾಮರಾದ ಮುಫ್ತಿ ಮಹಮ್ಮದ್ ತಲ್ಹಾ ಅವರು ಪ್ರವಚನ ನೀಡಿ ಮಾತನಾಡಿ, ಪ್ರಪಂಚದ ಎಲ್ಲಾ ಭಾಗಗಳಿಂದ ಬರುವ ಬಡ-ಶ್ರೀಮಂತ, ಕಪ್ಪು-ಬಿಳುಪು, ಭಾಷೆ-ವೇಷಭೂಷಗಳ ಭೇದವಿಲ್ಲದೆ ಎಲ್ಲರೂ ಒಬ್ಬನೇ ಸೃಷ್ಟಿಕರ್ತನ ದಾಸರು ಎಂಬ ಸಂದೇಶವನ್ನು ಸಾರುವ ಪವಿತ್ರ ಸ್ಥಳ ಮಕ್ಕಾ. ಮಾನವರ ಸಮಾನತೆ ಹಾಗೂ ಭಕ್ತಿಯ ಮಹತ್ವವನ್ನು ಇಸ್ಲಾಂ ಸಾರುತ್ತದೆ ಎಂದರು.

ಸೃಷ್ಟಿಕರ್ತನಿಗೆ ಇರುವ ಅಪಾರ ಪ್ರೀತಿಯ ಸಂಕೇತವೇ ಬಕ್ರೀದ್. ಅಲ್ಲಾಹನ ಆದೇಶಕ್ಕೆ ತಲೆಬಾಗಿ ತಮ್ಮ ಪ್ರಿಯ ಪುತ್ರನನ್ನೇ ಅರ್ಪಿಸಲು ಸಿದ್ಧರಾದ ಪ್ರವಾದಿ ಇಬ್ರಾಹಿಂ ಅಲೈಹಿಸ್ಸಲಾಂ ಅವರ ತ್ಯಾಗ ಮತ್ತು ನಿಷ್ಠೆಯ ಸ್ಮರಣಾರ್ಥ ಈ ಹಬ್ಬವನ್ನು ಆಚರಿಸಲಾಗುತ್ತದೆ. ಮನುಷ್ಯನು ದೇವರ ಮಾರ್ಗದಲ್ಲಿ ತ್ಯಾಗ, ಶಾಂತಿ ಮತ್ತು ಮಾನವೀಯತೆಯನ್ನು ಅಳವಡಿಸಿಕೊಳ್ಳಬೇಕೆಂದರು.

ಮಕ್ಕಳು ತಂದೆ-ತಾಯಿಯರ ವೃದ್ಧಾಪ್ಯದ ಆಸರೆಯಾಗಬೇಕೇ ಹೊರತು ಅವರ ಕಣ್ಣೀರಿಗೆ ಕಾರಣವಾಗಬಾರದು. ಮಾದಕ ವ್ಯಸನದಿಂದ ಕುಟುಂಬಗಳು ಅನುಭವಿಸುವ ನೋವು ಹಾಗೂ ಸಮಾಜದ ಮೇಲೆ ಬೀರುವ ದುಷ್ಪರಿಣಾಮಗಳ ಕುರಿತು ಪ್ರತಿಯೊಬ್ಬರೂ ಎಚ್ಚೆತ್ತುಕೊಳ್ಳಬೇಕೆಂದು ಭಾವುಕರಾಗಿ ಮನವಿ ಮಾಡಿದರು.

ಜಾಮಿಯಾ ಮಸೀದಿ ಅಧ್ಯಕ್ಷ ಜಾಫರ್ ಅಲಿ, ಪ್ರಾಧಿಕಾರದ ಅಧ್ಯಕ್ಷ ಸೈಯದ್ ಮುಫೀಸ್ ಸೇರಿ ವಿವಿಧ ಧಾರ್ಮಿಕ ಮುಖಂಡರು, ಗಣ್ಯರು ಹಾಗೂ ಮುಸ್ಲಿಂ ಬಾಂಧವರು ಭಾಗವಹಿಸಿದ್ದರು.

### ಬಕ್ರೀದ್ : ಈದ್ಗಾದಲ್ಲಿ ಸಾಮೂಹಿಕ ಪ್ರಾರ್ಥನೆ

» ಮೊದಲನೇ ಪುಟದಿಂದ

ಮತ್ತಷ್ಟು ಬಲಪಡಿಸುತ್ತದೆ. ಈ ಶುಭ ಸಂದರ್ಭದಲ್ಲಿ ಎಲ್ಲರಿಗೂ ಬಕ್ರೀದ್ ಹಬ್ಬದ ಶುಭಾಶಯ ತಿಳಿಸಿದರು.

ಹಜರತ್ ಗುಜರಾತಿ ದರ್ಗಾ ಕಮಿಟಿ ಹಾಗು ಈದ್ಗಾ ಕಮಿಟಿ ಅಧ್ಯಕ್ಷ ಸಮೀರ್ ಖಾನ್ ಮಾತನಾಡಿ, ಬಕ್ರೀದ್ ಹಬ್ಬವು ತ್ಯಾಗ ಮತ್ತು ಭಕ್ತಿಯ ಸಂಕೇತವಾಗಿದೆ. ಪ್ರವಾದಿ ಇಬ್ರಾಹಿಂ ಅವರು ಅಲ್ಲಾಹನ ಆದೇಶದಂತೆ ತಮ್ಮ ಪುತ್ರ ಪ್ರವಾದಿ ಇಸ್ಮಾಯಿಲ್ ಅವರನ್ನು ಬಲಿ ಕೊಡಲು ಸಿದ್ಧರಾದ ಘಟನೆಯನ್ನು ಸ್ಮರಿಸುವ ದಿನವೇ ಬಕ್ರೀದ್. ಇದು ನಂಬಿಕೆ, ಸಹನೆ ಹಾಗು ದೇವರ ಮೇಲಿನ ಅಪಾರ ಭಕ್ತಿಯ ಪ್ರತೀಕ ಎಂದು ಹೇಳಿದರು.

ಹಬ್ಬದ ಸಂದರ್ಭದಲ್ಲಿ ಪ್ರಾಣಿ ಬಲಿ ನೀಡಿ ಅದರ ಮಾಂಸವನ್ನು ಬಡವರು, ನಿರ್ಗತಿಕರು ಹಾಗು ಬಂಧು ಬಳಗದ ವರಿಗೆ ಹಂಚಲಾಗುತ್ತದೆ. ಸಮಾಜದಲ್ಲಿ ಸಮಾನತೆ, ಸಹಾಯ ಮನೋಭಾವ ಹಾಗು ಮಾನವೀಯ ಮೌಲ್ಯಗಳನ್ನು ಬಲಪಡಿಸುವುದು ಈ ಹಬ್ಬದ ಪ್ರಮುಖ ಉದ್ದೇಶ. ಪ್ರಪಂಚದ ನಾನಾ ಭಾಗಗಳಿಂದ ಮುಸ್ಲಿಂ ಸಮುದಾಯ ದವರು ಇದೇ ಸಂದರ್ಭದಲ್ಲಿ ಹಜ್ ಯಾತ್ರೆ ಕೈಗೊಳ್ಳುತ್ತಾರೆ. ದೇಶದ ಅಭಿವೃದ್ಧಿ, ಸಮಾಜದ ಶಾಂತಿ ಮತ್ತು ಸೌಹಾರ್ದತೆಗಾಗಿ ಪ್ರಾರ್ಥನೆ ಸಲ್ಲಿಸಲಾಗಿದೆ ಎಂದು ಹೇಳಿದರು.

# ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡಿ

• ಪ್ರಜೋದಯ ವರದಿ



**ಹೆತ್ತೂರು:** ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನು ನೀಡಬೇಕೆಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ತಿಳಿಸಿದರು.

ಗ್ರಾಮದಲ್ಲಿ ಗುರುವಾರ ಹೆತ್ತೂರು ಹೋಬಳಿ ಒಕ್ಕಲಿಗರ ಸಮುದಾಯ ಭವನದ ನೂತನ ಭೋಜನಾ ಕೊಠಡಿ, ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜ ಉತ್ತಮ ಸ್ಥಿತಿಯಲ್ಲಿ ಸಾಗಬೇಕೆಂದರೆ ಪ್ರತಿಯೊಬ್ಬ ಮಗುವೂ ಸಹ ಉತ್ತಮ ಶಿಕ್ಷಣ ಪಡೆಯುವ ಮೂಲಕ ಪ್ರಜ್ಞಾವಂತರಾಗಬೇಕು. ಆದಿಚುಂಚನಗಿರಿ ಶ್ರೀ ಮಠವು ಶಿಕ್ಷಣಕ್ಕಾಗಿ ಹಲವು ಶಿಕ್ಷಣ ಸಂಸ್ಥೆಗಳನ್ನು ರಾಜ್ಯದ ಎಲ್ಲೆಡೆ ತೆರೆದಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಸ್ಟೆಲ್ ಸೌಲಭ್ಯಗಳನ್ನು ಸಹ ನೀಡುತ್ತಿದೆ. ಹಲವು ದಾನಿಗಳು ಸಹ ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳ ಏಳಿಗೆಗೆ ನೆರವು ನೀಡುತ್ತಿದ್ದಾರೆ. ಸಮುದಾಯದಿಂದ ಸಿಗುವ ಸವಲತ್ತುಗಳನ್ನು ಸಮರ್ಪಕವಾಗಿ ಬಳಸಿಕೊಂಡು ಜೀವನ ಮಟ್ಟವನ್ನು ಉತ್ತಮವಾಗಿಸಿಕೊಳ್ಳಿ. ಸಮುದಾಯದ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳುವುದರಿಂದ ಸಮಯ ಮತ್ತು ಹಣ ಉಳಿತಾಯವಾ ಗುವುದಲ್ಲದೆ, ಸಮುದಾಯದ ಅಭಿವೃದ್ಧಿಗೂ ಸಹ ಕಾರಿಯಾಗುತ್ತದೆ. ಒಕ್ಕಲಿಗ ಸಮುದಾಯಕ್ಕೆ ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ಪ್ರಮುಖ ಧಾರ್ಮಿಕ ಮತ್ತು ಶೈಕ್ಷಣಿಕ ಕೇಂದ್ರವಾಗಿದೆ ಎಂದು ತಿಳಿಸಿದರು.

ಕರ್ನಾಟಕ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಅವರು ಮಾತನಾಡಿ, ಒಕ್ಕಲಿಗ ಸಮುದಾಯ ಕೃಷಿಕ ಸಮುದಾಯವಾಗಿದ್ದು ಕರ್ನಾಟಕದಲ್ಲಿ ಹೆಚ್ಚು ಸಾಂದ್ರತೆಯಲ್ಲಿದ್ದು, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ರಂಗಗಳಲ್ಲಿ ಒಕ್ಕಲಿಗರು ಮಹತ್ವದ ಕೊಡುಗೆ ನೀಡಿದ್ದಾರೆ. ಇತಿಹಾಸದಲ್ಲಿ ಒಕ್ಕಲಿಗರು ಹೆಚ್ಚು ಕೃಷಿಕರಾಗಿ ಗುರುತಿಸಿ ಕೊಂಡಿದ್ದು, ಒಕ್ಕಲಿಗರು ತಮ್ಮದೇ ಆದ ವಿಶಿಷ್ಟವಾದ ಆತಿಥ್ಯ, ಹಬ್ಬ-ಹರಿದಿನಗಳ ಆಚರಣೆ ಮತ್ತು ಸಾಂಪ್ರದಾಯಿಕ ಶೈಲಿಯ ಆಹಾರ ಪದ್ಧತಿಗೆ ಹೆಸರುವಾಸಿಯಾಗಿದ್ದಾರೆ. ಹೋಬಳಿ ಕೇಂದ್ರದಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸಿರುವುದು ತುಂಬಾ ಸಂತೋಷದ ವಿಷಯ. ಯುವಕರು ಹೀಗೆ ಸಾಮರಸ್ಯದಿಂದ ಸಮಾಜದ ಏಳಿಗೆಗೆ ಮತ್ತಷ್ಟು ಕೆಲಸ ಮಾಡಲು ಮುಂದಾಗಬೇಕು ಎಂದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಹೆತ್ತೂರಿನಂತಹ ಹೋಬಳಿ ಕೇಂದ್ರದಲ್ಲಿ ಒಕ್ಕಲಿಗ ಸಮುದಾಯ ಭವನಕ್ಕೆ ಭೋಜನಾಲಯ ನಿರ್ಮಾಣವಾಗುತ್ತಿರುವುದು ಸಂತೋಷದ ವಿಷಯ. ಈ ಭಾಗದ ಜನಸಾಮಾನ್ಯರು ಕಾರ್ಯಕ್ರಮ ಮಾಡಲು ಅನುಕೂಲವಾಗುತ್ತದೆ. ಭವನದ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿ ಮತ್ತಷ್ಟು ನೆರವು ನೀಡುತ್ತೇನೆ ಎಂದರು.

ಸಂಘದ ನೂತನ ಅಧ್ಯಕ್ಷರಾಗಿ ಹೆಚ್.ಜಿ.ಮಹೇಶ್, ಉಪಾಧ್ಯಕ್ಷ ಬಿಳುತಾಳು ಕಿರಣ್, ಖಜಾಂಚಿ ಹೆಚ್.ಪಿ.ಸತೀಶ್, ಕಾರ್ಯದರ್ಶಿ ಕೃಷ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ, ಮಾಜಿ ಶಾಸಕರಾದ ಹೆಚ್.ಎಂ.ವಿಶ್ವನಾಥ, ಹೆಚ್.ಕೆ.ಕುಮಾರಸ್ವಾಮಿ, ಲೋಕೋಪಯೋಗಿ ಇಲಾಖೆಯ ಹೆಚ್ಚುವರಿ ನಿರ್ದೇಶಕರಾದ ಬಿ.ಜಿ.ಇಂದಿರಾ ನಾಗೇಶ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಶ್ಮಿತ ಪವನ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್.ಮುದ್ದೇಗೌಡ, ನಿವೃತ್ತ ಉಪತಹಶೀಲ್ದಾರ್ ಗಂಗಾಧರ್, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಉಜ್ಮಾರಿಜ್ವಿ ಸುದರ್ಶನ್, ಹೋಬಳಿ ಒಕ್ಕಲಿಗರ ಸಂಘದ ಅಧ್ಯಕ್ಷ ರಾಧಾಕೃಷ್ಣ, ಕಾರ್ಯದರ್ಶಿ ಕುಶಾಲಪ್ಪ, ಸದಸ್ಯರು ಹಾಗು ನಿರ್ದೇಶಕರು ಹಾಜರಿದ್ದರು.

## ಕುವೈತ್‌ನಲ್ಲಿ ಅಮೇರಿಕಾ ವಾಯುನೆಲೆ ಗುರಿಯಾಗಿಸಿ ಇರಾನ್ ಪ್ರತಿದಾಳಿ

• ಪ್ರಜೋದಯ ವರದಿ

**ದುಬೈ:** ಬಂದರ್ ಅಬ್ಬಾಸ್ ಬಳಿ ನಡೆದ ದಾಳಿಗೆ ಪ್ರತೀ ಕಾರವಾಗಿ ಕುವೈತ್‌ನಲ್ಲಿರುವ ಅಮೇರಿಕಾದ ವಾಯು ನೆಲೆಯನ್ನು ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ.

ಅಮೇರಿಕಾ ನೆಲೆಗಳನ್ನು ಗುರಿಯಾಗಿಸಿ ನಡೆಸಿರುವ ದಾಳಿಯನ್ನು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಖಚಿತಪಡಿಸಿದೆ. ಅಮೇರಿಕಾ ಇರಾನ್ ನಡುವೆ ಕದನ ವಿರಾಮ ಹಾಗೂ ಶಾಂತಿ ಒಪ್ಪಂದ ಅಂತಿಮ ಹಂತಕ್ಕೆ ತಲುಪಿರುವ ಮಧ್ಯೆ ದಾಳಿ ನಡೆದಿದ್ದು, ಅನಿಶ್ಚಿತತೆ ಮುಂದುವರಿದಿದೆ. ಈ ಮೊದಲು ಕರಾವಳಿ ನಗರಿ ಬಂದರ್ ಅಬ್ಬಾಸ್‌ನಲ್ಲಿ ಇರಾನ್ ಮಿಲಿಟರಿ ಗುರಿಯಾಗಿಸಿಕೊಂಡು ಅಮೇರಿಕಾ ದಾಳಿ ನಡೆಸಿತ್ತು. ಮತ್ತೊಂದೆಡೆ ಅಮೇರಿಕಾ-ಇರಾನ್ ಸಂಘರ್ಷದಿಂದಾಗಿ ಜಾಗತಿಕ ಬಿಕ್ಕಟ್ಟು ಮುಂದು ವರಿದಿದ್ದು, ತೈಲ ಬೆಲೆ ಏರಿಕೆಯಾಗಲು ಕಾರಣವಾಗಿದೆ. ತನ್ನ ವಾಯು ರಕ್ಷಣಾ ವ್ಯವಸ್ಥೆಯು ವೈರಿಗಳ ಕ್ಷಿಪಣಿ ಹಾಗೂ ಡ್ರೋನ್ ದಾಳಿಯನ್ನು ಯಶಸ್ವಿಯಾಗಿ ಹೊಡೆ ದುರುಳಿಸಿದೆ ಎಂದು ಕುವೈತ್ ಸೇನೆ ತಿಳಿಸಿದೆ. ಆದರೆ ಎಲ್ಲಿಂದ ದಾಳಿ ನಡೆದಿದೆ ಎಂಬುದರ ಬಗ್ಗೆ ಮಾಹಿತಿ ನೀಡಿಲ್ಲ.

# ಭಾರತದ ಆರ್ಥಿಕ ಬೆಳವಣಿಗೆಗೆ ಆಸ್ಟ್ರೇಲಿಯಾ ಪ್ರಧಾನಿ ಶ್ಲಾಘನೆ

• ಪ್ರಜೋದಯ ವರದಿ

**ಕ್ಯಾನ್ಬೆರಾ:** ಭಾರತದ ಜಾಗತಿಕ ಆರ್ಥಿಕ ಬೆಳವಣಿಗೆಯು ಇಂಡೋ-ಪೆಸಿಫಿಕ್ ಪ್ರದೇಶಕ್ಕೆ ಒಂದು ಅಸಾಮಾನ್ಯ ಅವಕಾಶ ಎಂದು ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ಬಣ್ಣಿಸಿದ್ದಾರೆ. ಹಾಗೆಯೇ ಪ್ರಧಾನಿ ನರೇಂದ್ರ ಮೋದಿ ಅವರನ್ನು ದೇಶಕ್ಕೆ ಮತ್ತೊಮ್ಮೆ ಸ್ವಾಗತಿಸಲು ತಾವು ಕಾತರದಿಂದ ಕಾಯುತ್ತಿರುವುದಾಗಿ ತಿಳಿಸಿದ್ದಾರೆ.

ಕ್ಯಾನ್ಬೆರಾದಲ್ಲಿ ಸಂಸತ್ತನ್ನು ಉದ್ದೇಶಿಸಿ ಮಾತನಾಡಿದ ಅಲ್ಬನೀಸ್, ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತವು ಪ್ರಸ್ತುತ ದಶಕದಲ್ಲೇ ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲು ಸಜ್ಜಾಗಿದೆ. ಇದು ನಮ್ಮ ಪ್ರದೇಶಕ್ಕೆ ಸಿಕ್ಕಿರುವ ಅತ್ಯಂತ ದೊಡ್ಡ ಅವಕಾಶವಾಗಿದೆ. ನಮ್ಮದು ಫೆಸಿಫಿಕ್ ರಾಷ್ಟ್ರ ಹೌದು, ಜೊತೆಗೆ ಹಿಂದೂ ಮಹಾಸಾಗರದ ರಾಷ್ಟ್ರವೂ ಆಗಿದ್ದೇವೆಂದು ಉಭಯ ದೇಶಗಳ ಭೌಗೋಳಿಕ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು.

2022ರಲ್ಲಿ ಸಹಿ ಹಾಕಲಾದ ಆರ್ಥಿಕ

### ಮೋದಿ ಭೇಟಿಗೆ ಆಂಥೋನಿ ಅಲ್ಬನೀಸ್ ಕಾತರ



ಸಹಕಾರ ಮತ್ತು ವ್ಯಾಪಾರ ಒಪ್ಪಂದವು ಉಭಯ ದೇಶಗಳ ನಡುವಿನ ವಾಣಿಜ್ಯ ಸಂಬಂಧವನ್ನು ಬಲಪಡಿಸಿದೆ. ಸಂಸ್ಕೃತಿ, ಶಿಕ್ಷಣ ಮತ್ತು ಕ್ರಿಕೆಟ್ ನಮ್ಮನ್ನು ಮತ್ತಷ್ಟು ಹತ್ತಿರ ತಂದಿವೆ ಎಂದು ಅವರು ಸ್ಮರಿಸಿದರು.

1991ರಲ್ಲಿ ತಾವು ಮೊದಲ ಬಾರಿಗೆ ಸಾಮಾನ್ಯ ಪ್ರವಾಸಿಯಾಗಿ ಭಾರತಕ್ಕೆ ಭೇಟಿ ನೀಡಿದ್ದನ್ನು ನೆನಪಿಸಿಕೊಂಡ ಅಲ್ಬನೀಸ್, ಪ್ರಧಾನಿಯಾದ ಬಳಿಕ ಎರಡು ಬಾರಿ ಭಾರತಕ್ಕೆ ಪ್ರವಾಸ ಕೈಗೊಂಡಿರುವುದಾಗಿ ತಿಳಿಸಿದರು.

ಭಾರತದ ನೈಜ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಬಸ್ ಅಥವಾ ರೈಲಿನಲ್ಲಿ ಪ್ರಯಾಣಿಸುವುದೇ ಅತ್ಯುತ್ತಮ ಮಾರ್ಗ. ಭಾರತೀಯರ ಆತ್ಮೀಯತೆಯನ್ನು ಹತ್ತಿರದಿಂದ ನೋಡುವುದು ಒಂದು ಅದ್ಭುತ ಅನುಭವ. ಈಗ ಅದೇ ರೀತಿ ಶೀಘ್ರದಲ್ಲೇ ಪ್ರಧಾನಿ ಮೋದಿ ಅವರನ್ನು ಇಲ್ಲಿ ಆತಿಥ್ಯ ನೀಡುವ ಸೌಭಾಗ್ಯ ನನ್ನದಾಗಲಿದ್ದು, 2ನೇ ಬಾರಿಗೆ ಈ ಅವಕಾಶವನ್ನು ಪುನರಾವರ್ತಿಸಲು ನಾನು ಉತ್ಸುಕನಾಗಿದ್ದೇನೆ ಎಂದರು.

ಆಸ್ಟ್ರೇಲಿಯಾದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ವಲಸೆ ಸಮುದಾಯವಾಗಿರುವ 10 ಲಕ್ಷಕ್ಕೂ ಅಧಿಕ ಭಾರತೀಯ-ಆಸ್ಟ್ರೇಲಿಯನ್ನರು ಪ್ರಧಾನಿ ಮೋದಿಯವರ ಈ ಭೇಟಿಯನ್ನು ಮತ್ತಷ್ಟು ಐತಿಹಾಸಿಕವಾಗಿಸಲಿದ್ದಾರೆ. ಪ್ರಧಾನಿ ಮೋದಿ ಅವರು ಕೊನೆಯದಾಗಿ 2023ರ ಮೇ ತಿಂಗಳಲ್ಲಿ ಆಸ್ಟ್ರೇಲಿಯಾಕ್ಕೆ ಭೇಟಿ ನೀಡಿದ್ದರು.

ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಭಾರತೀಯ ಸಮುದಾಯವು ದೇಶದ ಆರ್ಥಿಕತೆಯನ್ನು ಬಲಪಡಿಸಿದೆ ಮತ್ತು ಅಸಂಖ್ಯಾತ ಸಣ್ಣ ಉದ್ಯಮಗಳಿಗೆ ನೆರವಾಗಿದೆ. ನಿಮ್ಮಿಂದಾಗಿ ನಮ್ಮ ದೇಶ ಮತ್ತಷ್ಟು ಉತ್ತಮಗೊಂಡಿದೆ. ನನ್ನ ಸರ್ಕಾರ ಯಾವಾಗಲೂ ನಿಮ್ಮ ಹಿತಾಸಕ್ತಿಗಳ ಪರವಾಗಿ ನಿಲ್ಲುತ್ತದೆ. ಸಮಾಜವನ್ನು ಒಡೆಯುವ ಯಾವುದೇ ಪ್ರಯತ್ನಗಳನ್ನು ನಾವು ತಳ್ಳಿಹಾಕುತ್ತೇವೆ.

ಆಸ್ಟ್ರೇಲಿಯಾ ಪ್ರಧಾನಿ ಸಂಸತ್ತಿನಲ್ಲಿ ಮಾತನಾಡಿದ ವಿಡಿಯೋ ತುಣುಕನ್ನು ಭಾರತದಲ್ಲಿನ ಆಸ್ಟ್ರೇಲಿಯಾ ಹೈಕಮಿಷನರ್ ಫಿಲಿಪ್ ಗ್ರೀನ್ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ತಮ್ಮ ಪ್ರಧಾನಿಗೆ ಭಾರತದ ಮೇಲಿರುವ ಗೌರವವು ತಮ್ಮ ಜವಾಬ್ದಾರಿಯನ್ನು ಮತ್ತಷ್ಟು ಅರ್ಥ ಪೂರ್ಣವಾಗಿಸಿದೆ ಎಂದು ಬರೆದುಕೊಂಡಿದ್ದಾರೆ. ಇತ್ತೀಚೆಗೆ ಪ್ರಧಾನಿ ಮೋದಿ ಅವರು ಆಸ್ಟ್ರೇಲಿಯಾದ ವಿದೇಶಾಂಗ ಸಚಿವೆ ಪೆನ್ನಿ ವಾಂಗ್ ಅವರನ್ನು ಭೇಟಿ ಮಾಡಿ ಉಭಯ ದೇಶಗಳ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯ ಬಗ್ಗೆ ಚರ್ಚಿಸಿದ್ದರು.

## ಹೊಳೆನರಸೀಪುರದಲ್ಲಿ ಬಕ್ರೀದ್ ಸಂಭ್ರಮ



• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣದ ಅರಕಲಗೂಡು ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಮುಸ್ಲಿಂರು ಸಂಭ್ರಮದಿಂದ ಬಕ್ರೀದ್ ಹಬ್ಬವನ್ನು ಆಚರಿಸಿದರು. ಸಾಮೂಹಿಕ ಪ್ರಾರ್ಥನೆ ಬಳಿಕ ಪರಸ್ಪರ ಆಲಿಂಗನದೊಂದಿಗೆ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು ಸಡಗರದ ವಾತಾವರಣ ನಿರ್ಮಾಣವಾಯಿತು.

ಸಂಸದ ಶ್ರೇಯಸ್ ಪಟೇಲ್ ಭಾಗವಹಿಸಿ ಮುಸ್ಲಿಂ ಸಮುದಾಯಕ್ಕೆ ಹಬ್ಬದ ಶುಭಾಶಯಗಳನ್ನು ಕೋರಿ ಮಾತನಾಡಿದ ಅವರು, ಬಕ್ರೀದ್ ತ್ಯಾಗ ಮತ್ತು ಬಲಿದಾನದ ಸಂಕೇತವಾಗಿದೆ. ರಾಜ್ಯದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಹಬಾಳ್ವೆ ಸದಾ ನೆಲೆಸಲಿ ಎಂದು ಪ್ರಾರ್ಥಿಸುತ್ತೇನೆ. ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ ಹಾಗೂ ಸಂಸದನಾಗಿ ತಾನು ಸದಾ ಬದ್ಧನಾಗಿರುವುದಾಗಿ ಭರವಸೆ ನೀಡಿದರು.

ಉಪನ್ಯಾಸಕ ಫಯಾಜ್ ಪಾಷ ಮಾತನಾಡಿ, ಬಕ್ರೀದ್ ಹಬ್ಬದ ಧಾರ್ಮಿಕ ಹಾಗೂ ಸಾಮಾಜಿಕ ಮಹತ್ವವನ್ನು ವಿವರಿಸಿದರು. ಪ್ರವಾದಿ ಇಬ್ರಾಹಿಂ ಅವರ ತ್ಯಾಗದ ಸ್ಮರಣಾರ್ಥ ಈ ಹಬ್ಬವನ್ನು ಆಚರಿಸಲಾಗುತ್ತಿದ್ದು, ಸಮಾಜದಲ್ಲಿ ಸಹಾನುಭೂತಿ ಹಾಗೂ ಸಹಬಾಳ್ವೆಯನ್ನು ಉತ್ತೇಜಿಸುವುದೇ ಮೂಲ ಉದ್ದೇಶವಾಗಿದೆ ಎಂದರು.

## ಸಾಂಪ್ರದಾಯಿಕ ಪ್ರಿಮಿಕ್ಸ್ ಉತ್ಪನ್ನ ಮಾರುಕಟ್ಟೆಗೆ

### ಅಕ್ಷಮಾಲ-ಧಮಾಕ ಮಸಾಲ ವೆಬ್‌ಸೈಟ್‌ಗೆ ಅನಾವರಣ

• ಪ್ರಜೋದಯ ವರದಿ



**ಹಾಸನ:** ಸಾಂಪ್ರದಾಯಿಕ ಆಹಾರ ತಯಾರಿಕಾ ಘಟಕಗಳಾದ ಅಕ್ಷಮಾಲ-ಧಮಾಕ ಮಸಾಲ ಪ್ರಿಮಿಕ್ಸ್ ಉತ್ಪನ್ನಗಳ ಬಿಡುಗಡೆ ಹಾಗು ವೆಬ್‌ಸೈಟ್‌ಗೆ ಅನಾವರಣ ಗುರುವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

ಚಲನಚಿತ್ರ ನಿರ್ದೇಶಕ ಟಿ.ಎನ್.ಸೀತಾರಾಂ, ಗೀತಾ ಸೀತಾರಾಂ, ನಟಿ ಸುಧಾ ಬೆಳವಾಡಿ, ಎಂ.ಜಿ.ಸತ್ಯರಾವ್ ಮೊದಲಾದವರು ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಲೋಕಾರ್ಪಣೆ ಮಾಡಿದರು.

ಬಳಿಕ ಮಾತನಾಡಿದ ಸೀತಾರಾಮ್ ಅವರು, ಇಂದಿನ ತಾಯಂದಿರಿಗೆ ಅನುಕೂಲ ಆಗಲಿ ಎಂದು ಶ್ವೇತಾ ಮತ್ತು ಶರ್ಮಿಳಾ ಅವರು ಸಾಂಪ್ರದಾಯಿಕ ಇನ್ ಸ್ಟೆಂಟ್ ಫುಡ್ ತಯಾರು ಮಾಡಿರುವುದು ತುಂಬಾ ಒಳ್ಳೆಯ ಬೆಳವಣಿಗೆ, ಶ್ವೇತಾ ಅವರದ್ದು ಧಾರಾಳ ಮನಸ್ಸು, ಅಂತೆಯೇ ಈ ಉದ್ಯಮವೂ ಅಷ್ಟೇ ಧಾರಾಳವಾಗಿ ಬೆಳೆಯಲಿ, ಬೆಳಗಲಿ ಎಂದು ಹಾರೈಸಿದರು.

ನನ್ನ ಮತದಾನ ಸಿನಿಮಾಕ್ಕೆ ಹಾಸದವರೇ ನಿರ್ಮಾಪಕರು ಎಂದು ನೆನಪು ಮಾಡಿಕೊಂಡ ಸೀತಾರಾಂ, ಹಾಸನದಲ್ಲಿ ಸುಂದರವಾದ ನೆನಪು, ಸುಂದರ ಮನಸು ಇವೆ. ನಾವು ಹೇಗೆ ತೆಗೆದುಕೊಳ್ಳುತ್ತೇವೆಯೋ, ಸ್ವೀಕರಿಸುತ್ತೇವೆಯೋ ಹಾಗೆ ಬದುಕು ಸಂತೋಷವಾಗಿರುತ್ತದೆ. ನನಗೆ ಹಾಸನ ಅತ್ಯಂತ ಪ್ರಿಯವಾದ ಜಿಲ್ಲೆ, ಇಷ್ಟವಾದ ಊರು, ಕಿ.ರಂ.ನಾಗರಾಜು ಅವರು ಹುಟ್ಟಿದ ಊರು ಇದೆ. ನಾನು ಕುಮಾರವ್ಯಾಸ ಕಾವ್ಯವನ್ನು ತಿಳಿದಿದ್ದು, ಕಿರಂ ಅವರಿಂದಲೇ ಎಂದು ಸ್ಮರಿಸಿದರು.

ನಟಿ ಸುಧಾ ಬೆಳವಾಡಿ ಅವರು ಮಾತನಾಡಿ, ಮನೆಯಲ್ಲಿ ನಾವು ಏನೇ ಅಡುಗೆ ಮಾಡಿದರೂ ಮಕ್ಕಳಿಗೆ ಬೇರೆಯದೇ, ಹೊರಗಿನದೇ ಬೇಕು. ಜೊಮ್ಯಾಟೋ ಸ್ವಿಗ್ಗಿ ಮೂಲಕ ಆರ್ಡರ್ ಮಾಡಿ ತರಿಸಿಕೊಳ್ಳುತ್ತಾರೆಂದು ಬೇಸರ ಹೊರ ಹಾಕಿದರು. ಇಂದು ಧಮಾಕ ಸಾಂಪ್ರದಾಯಿಕ ಅಡುಗೆ ಉತ್ಪನ್ನಗಳನ್ನು ತಯಾರು ಮಾಡುವ ಹೊಣೆಯನ್ನು ಇಬ್ಬರು ಹೆಣ್ಣು ಮಕ್ಕಳು ಹೊತ್ತಿರುವುದು ಸಂತೋಷದಾಯಕ. ಹೆಣ್ಣು ಮಕ್ಕಳು ಅಡುಗೆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಾರೆ. ಅಕ್ಷಮಾಲ ಉತ್ಪನ್ನವೂ ಹಾಗೆಯೇ ಇರಲಿದೆ ಎಂದರು.

ಇಂದು ನಾವು ತಿನ್ನುವ ಬಹುತೇಕ ಆಹಾರ ಕಲಬೆರಕೆಯಿಂದ ಕೂಡಿದೆ. ಹಾಗಾಗಿ ಆರೋಗ್ಯವೇ ಭಾಗ್ಯ ಅನ್ನೋ ಪದ ಈಗ ಅರ್ಥ ಆಗುತ್ತಿದೆ. ಅದಕ್ಕೆ ವ್ಯತಿರಿಕ್ತವಾಗಿ ಸಾಂಪ್ರದಾಯಿಕ ರೀತಿಯಲ್ಲಿ ಎಲ್ಲಾ ರೀತಿಯ ಅಡುಗೆ ಉತ್ಪನ್ನ ತಯಾರು ಮಾಡಿರುವುದು ಸ್ವಾಗತಾರ್ಹ. ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಿ, ಇದು ತುಂಬಾ ಒಳ್ಳೆಯ ಕೆಲಸ, ಉತ್ಪನ್ನ ಉತ್ತಮವಾಗಿ ಬೆಳೆಯಲಿ ಎಂದು ಹರಸಿದರು.

ಮಂಜು ಬನವಾಸೆ ಮಾತನಾಡಿ, ಈ ವಿಶೇಷ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಹೊಣೆ ಹೊತ್ತಿರುವ ಶ್ವೇತಾ, ಶರ್ಮಿಳಾ ಅವರು ಹಗಲು ರಾತ್ರಿ ಶ್ರಮ ಹಾಕುತ್ತಿದ್ದಾರೆ ಎಂದರು. ಶರ್ಮಿಳಾ ಪುನೀತ್, ಶ್ವೇತಾ ಮಂಜು ಬನವಾಸೆ, ಪುನೀತ್ ಮತ್ತಿತರರು ಹಾಜರಿದ್ದರು.

### ರಾಜಕೀಯ ಪಕ್ಷಗಳ ಮುಖಂಡರಿಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ನಿರ್ದೇಶನ

# ಮತದಾರರ ಪಟ್ಟಿ ಪರಿಷ್ಕರಣೆ: ಬೂತ್ ಏಜೆಂಟ್ ನೇಮಿಸಿ

• ಪ್ರಜೋದಯ ವರದಿ





**ಹಾಸನ:** ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ನಡೆಯುತ್ತಿದೆ. ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಹಾಗು ಪ್ರತಿನಿಧಿಗಳು ಹೆಚ್ಚಿನ ಗಮನಹರಿಸಿ ಬೂತ್ ಮಟ್ಟದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಗೆ ಸಹಕಾರಿಯಾಗುವಂತೆ ಪ್ರತಿ ಬೂತ್‌ಗೆ ಏಜೆಂಟ್ ನೇಮಕ ಮಾಡುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಕುರಿತು ವಿವಿಧ ರಾಜಕೀಯ ಪಕ್ಷಗಳ ನಾಯಕರು ಹಾಗು ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಚುನಾವಣಾ ಸಹಾಯವಾಣಿ ಸಂಖ್ಯೆ 1950 ಜೂನ್ 1 ರಿಂದ ಕಾರ್ಯ ನಿರ್ವಹಿಸಲಿದ್ದು, ಅದರ ಸಹಾಯ ಪಡೆಯುವಂತೆ ತಿಳಿಸಿದರು.

ಭಾರತ ಚುನಾವಣಾ ಆಯೋಗವು ಲೋಕಸಭಾ ಮತ್ತು ವಿಧಾನಸಭಾ ಚುನಾವಣೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ ವಿಶೇಷ ಸಮಗ್ರ ಮತದಾರರ ಪರಿಷ್ಕರಣೆ ಪಟ್ಟಿ ತಯಾರಿಸುವ ಪ್ರಕ್ರಿಯೆ ನಡೆಸುತ್ತಿದೆ. ಈ ನಿಟ್ಟಿನಲ್ಲಿ ಪ್ರತಿ ಬೂತ್‌ಗೆ ಮತದಾರರ ಏಜೆಂಟ್ ನೇಮಕ ಮಾಡಿ ಅದರ ಪಟ್ಟಿ ನೀಡುವ ಮೂಲಕ ಆರೋಗ್ಯಕರ ಮತದಾರರ ಪಟ್ಟಿ ತಯಾರಿಸಲು ಸಹಕಾರ ನೀಡುವಂತೆ ಕೋರಿದರು.

ಯಾವುದೇ ಪ್ರಜೆ ಮತದಾನದಿಂದ ವಂಚಿತರಾಗದಂತೆ ಗಮನಹರಿಸಬೇಕು. 2025ರ ಮತದಾರರ ಪಟ್ಟಿಯಲ್ಲಿರುವ ಹೆಸರುಗಳಿಗೆ ಸಂಬಂಧಿಸಿದಂತೆ 2002ರಲ್ಲಿರುವ ಮತದಾರರ ಪಟ್ಟಿಯ ಮತದಾರರ ಕುಟುಂಬದ ಸಂತತಿಗಳಾಗಿ ಮ್ಯಾಪಿಂಗ್ ಮಾಡಿ ಲಿಂಕ್ ಮಾಡಲಾಗು ತ್ತಿದ್ದು, ಈಗಾಗಲೇ ಶೇ.91 ರಷ್ಟಾಗಿದ್ದು, ಮ್ಯಾಪಿಂಗ್ ಕಾರ್ಯ ಜೂನ್ 16ರವರೆಗೆ ನಡೆಯಲಿದೆ ಎಂದು ತಿಳಿಸಿದರು.

ಮ್ಯಾಪಿಂಗ್‌ನಲ್ಲಿ ಸಿಗದೆ ಇರುವವರಿಗೆ ಬೂತ್ ಮಟ್ಟದ ಅಧಿಕಾರಿಗಳು ನೋಟೀಸ್ ನೀಡಿ ನೋಂದಣಿ ಫಾರಂ ನೀಡುತ್ತಾರೆ. ಅದನ್ನು ಭರ್ತಿ ಮಾಡಿ ನೀಡಿದ ನಂತರ ಹೆಸರು ಮತ್ತು ಫೋಟೋ ತಾಳೆಯಾಗುತ್ತಿರುವುದನ್ನು ಪರಿಶೀಲನೆ ಮಾಡಿ ಎರಡೂ ಕಡೆ ಹೆಸರಿದ್ದಲ್ಲಿ ಯಾವ ಸ್ಥಳದಲ್ಲಿ ಬೇಕೆಂದು ಒಪ್ಪಿಗೆ ನೀಡಿದ ನಂತರ ನಿಯಮಾನುಸಾರ ಒಂದು ಕಡೆ ಮತದಾರರ ಪಟ್ಟಿಯಲ್ಲಿ ಹೆಸರು ಡಿಲಿಟ್ ಮಾಡಲಾಗುವುದು. ಪೂರ್ವ ತಯಾರಿಗಾಗಿ ಮತಗಟ್ಟೆ ಅಧಿಕಾರಿಗಳು ಹಾಗು ಮತಗಟ್ಟೆ ಏಜೆಂಟ್‌ಗಳಿಗೆ ತರಬೇತಿ ನೀಡಲಾಗುವುದು. ಮತಗಟ್ಟೆ ಅಧಿಕಾರಿಗಳು ನಿವೃತ್ತಿ ಅಥವಾ ವರ್ಗಾವಣೆ ಆಗಿದ್ದಲ್ಲಿ ಬೇರೆಯವರನ್ನು ನೇಮಕ ಮಾಡಲು ಕ್ರಮವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮತಗಟ್ಟೆ ಅಧಿಕಾರಿಗಳ ಹೆಸರು ಫೋನ್ ನಂಬರ್‌ಗಳನ್ನು ಎಲ್ಲಾ ರಾಜಕೀಯ ಪಕ್ಷಗಳು ನಾಯಕರು ಹಾಗೂ ಪ್ರತಿನಿಧಿಗಳಿಗೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ವಿಶೇಷ ಸಮಗ್ರ ಪರಿಷ್ಕರಣೆಗ ಅರ್ಹತಾ ದಿನಾಂಕ ಬರುವ ಅಕ್ಟೋಬರ್ 1, ಪೂರ್ವ ತಯಾರಿ, ತರಬೇತಿ ಮತ್ತು ಮುದ್ರಣ ಜೂನ್ 26ರಿಂದ 29, ಆ.5 ರಂದು ಕರಡು ಪ್ರತಿ ಪ್ರಕಟಿಸಲಾಗುವುದು. ಆಕ್ಷೇಪಣೆ ಸಲ್ಲಿಸಲು ಆ.5 ರಿಂದಸೆ.4ರವರೆಗೆ ಅವಕಾಶ ಇದೆ. ಆಕ್ಷೇಪಣೆ ತಿರುವಳಿ ಆ.5 ರಿಂದ ಅ.3 ರವರೆಗೆ, ಅಂತಿಮ ಮತದಾರರ ಪಟ್ಟಿಯನ್ನು ಅ.7ರಂದು ಪ್ರಕಟ ಮಾಡಲಾಗುವುದೆಂದು ಹೇಳಿದರು.

ಜೋಡಣೆ ಮಾಡದೇ ಇರುವ ಮತದಾರರು, ಆಯೋಗ ನಿಗದಿಪಡಿಸಿರುವ 12 ವಿವಿಧ ದಾಖಲೆಗಳಲ್ಲಿ ಒಂದು ದಾಖಲೆ ನೀಡಿ ಮತದಾರರ ಪಟ್ಟಿಗೆ ಹೆಸರು ಸೇರಿಸಲು ಹೊಸ ಅರ್ಜಿ ನೀಡಬಹುದು. ವರ್ಷದಲ್ಲಿ 4 ಬಾರಿ ಜನವರಿ, ಏಪ್ರಿಲ್, ಜುಲೈ ಮತ್ತು ಅ.1 ರಂದು ಮತದಾರರ ಪಟ್ಟಿ ಪರಿಷ್ಕರಣೆ ಆಗುತ್ತದೆ. ಆಗ 18 ವರ್ಷ ಪೂರೈಸಿದವರು ಹೊಸ ಅರ್ಜಿ ಸಲ್ಲಿಸಬಹುದೆಂದು ತಿಳಿಸಿದರು.

ಜೂನ್ 30 ರಿಂದ ಜುಲೈ 29ರವರೆಗೆ ಬಿ.ಎಲ್.ಓ. ಗಳು ಮನೆ ಮನೆಗೆ ಭೇಟಿ ನೀಡಿ ತಮ್ಮ ಹೆಸರು ಮತ್ತಿತರ ಮಾಹಿತಿ ದಾಖಲಾಗಿರುವ ನಮೂನೆಯನ್ನು ದ್ವಿ ಪ್ರತಿಯಲ್ಲಿ ನೀಡುತ್ತಾರೆ. ಅದನ್ನು ಮತದಾರರು ಒಮ್ಮೆ ಓದಿ ಸರಿಯಿದೆ ಎಂದು ಪರಿಶೀಲಿಸಿ ಸಹಿ ಮಾಡಿ ನೀಡಿದ ಪ್ರತಿಯನ್ನು ಆನ್‌ಲೈನ್‌ನಲ್ಲಿ ಅಪ್ಲೋಡ್ ಮಾಡಲಾಗುವುದೆಂದು ತಿಳಿಸಿದರು.

ಸಭೆಯಲ್ಲಿ ಜೆಡಿಎಸ್‌ನಿಂದ ಶಾಸಕ ಕೆ.ಎಸ್.ಲಿಂಗೇಶ್, ಎಸ್.ದ್ಯಾವೇಗೌಡ, ಕಾಂಗ್ರೆಸ್‌ನ ರಘು ದಾಸರಕೊಪ್ಪಲು, ಬಿಜೆಪಿಯ ಅಮಿತ್ ಶೆಟ್ಟಿ, ಆಮ್‌ಆದ್ಮಿಯ ಯೋಗೇಶ್, ಕಮ್ಯುನಿಸ್ಟ್ ಪಕ್ಷದಿಂದ ನವೀನ್ ಕುಮಾರ್ ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK